ಟಿ.ಆರ್. ಚಂದ್ರಶೇಖರ

ಅಭಿವೃದ್ಧಿ ಮೀಮಾಂಸೆ

ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ



ಅಭಿವೃದ್ಧಿ ಮೀಮಾಂಸೆ

ಟಿ.ಆರ್. ಚಂದ್ರಶೇಖರ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ

ಹಂಪಿ ೫೮೩ ೨೭೭

ಅಭಿವೃದ್ಧಿ ಮೀಮಾಂಸೆ- ಟಿ.ಆರ್. ಚಂದ್ರಶೇಖರ, ಅರ್ಥಶಾಸ್ತ್ರ ವಿಭಾಗ,
ವಿಜಯನಗರ ಕಾಲೇಜ್, ಹೊಸಪೇಟೆ ೫೮೩ ೨೦೧

Printed at : Vinayaka Offset Printers
Bangalore - 560 078 Phone : 642102

ಪುಟ : ೩೬

ಮೊದಲ ಮುದ್ರಣ : ೧೯೯೩

ಬೆಲೆ : ೧ ರೂಪಾಯಿ

ಮುಖಪುಟ ವಿನ್ಯಾಸ : ಜಿ. ಜಯಕುಮಾರ್

ಡಿ.ಟಿ.ಪಿ ಸಂಯೋಜನೆ : ಅನಿತಾ ಬೊಥೆಲ್ಲೊ, ಕವಿಹಂ

ಪ್ರಕಾಶಕರು : ಚಿ. ಶ್ರೀನಿವಾಸರಾಜು
ನಿರ್ದೇಶಕ, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ ೫೮೩ ೨೧೧

ಪುಸ್ತಕಗಳು ದೊರೆಯುವ ಸ್ಥಳ

ಬೆಂಗಳೂರು ಕಛೇರಿ	**ಹಂಪಿ ಕಛೇರಿ**
ಕನ್ನಡ ವಿಶ್ವವಿದ್ಯಾಲಯ	ಪ್ರಸಾರಾಂಗ
ಕೊಠಡಿ. ೨೧೧	ಕನ್ನಡ ವಿಶ್ವವಿದ್ಯಾಲಯ
ಎರಡನೆಯ ಮಹಡಿ	ಹಂಪಿ ೫೮೩ ೨೧೧
ತಾಂತ್ರಿಕ ಶಿಕ್ಷಣ ಇಲಾಖೆ ಕಟ್ಟಡ	ಬಳ್ಳಾರಿ ಜಿಲ್ಲೆ
ಅರಮನೆ ರಸ್ತೆ, ಬೆಂಗಳೂರು ೫೬೦ ೦೦೧	

ABHIVRUDDHI MIMAMSE - T.R. Chandrashekhar, Dept. of Economics, Vijayanagara College, Hospet - 583201
First Impression 1993

ಅಭಿವೃದ್ಧಿ ಮೀಮಾಂಸೆ

'ಹನುಮದ್ವಿಶಾಸಕ್ಕೆ ಇಲ್ಲ ಎಲ್ಲೆ' **ಅಡಿಗ**

ಅಭಿವೃದ್ಧಿ, ಅಭ್ಯುದಯ, ಶ್ರೇಯಸ್ಸು, ಏಳಿಗೆ ಮುಂತಾದ ಪದಗಳನ್ನು ಸಮಾನ ಅರ್ಥದಲ್ಲಿ ಬಳಸಲಾಗುತ್ತಿದೆ. ವಿಶಾಲಾರ್ಥದಲ್ಲಿ ಈ ಎಲ್ಲಾ ಪರಿಭಾವನೆಗಳು ಒಂದೇ ನೆಲೆಯಲ್ಲಿ ನಿಲ್ಲುವಂಥವಾಗಿವೆ. ಆದರೆ, ಬೇರೆ ಬೇರೆ ಜ್ಞಾನ ಶಿಸ್ತುಗಳಲ್ಲಿ ಈ ಪರಿಭಾವ ನೆಗಳು ಬೇರೆ ಬೇರೆ ಅರ್ಥವಿನ್ಯಾಸ ಪಡೆದುಕೊಂಡು ಬಿಡುತ್ತವೆ. ಉದಾ. ಶ್ರೇಯಸ್ಸು ಸಾಹಿತ್ಯದಲ್ಲಿ ಒಂದು ಪಾರಿಭಾಷಿಕ ಪರಿಭಾವನೆಯಾದರೆ, ಅಭ್ಯುದಯವು ತತ್ವಶಾಸ್ತ್ರದಲ್ಲಿ ಬೇರೆಯೇ ಅರ್ಥನೆಲೆ ಪಡೆದುಕೊಂಡು ಬಿಡುತ್ತದೆ. ಹೀಗೆಯೇ *ಅಭಿವೃದ್ಧಿ*ಯನ್ನು ಅರ್ಥ ಶಾಸ್ತ್ರದಲ್ಲಿ ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಬಳಸಲಾಗುತ್ತಿದೆ. ಸರ್ವೇಸಾಮಾನ್ಯವಾಗಿ ಅರ್ಥಶಾಸ್ತ್ರದಲ್ಲಿ *ಆರ್ಥಿಕ ಅಭಿವೃದ್ಧಿ, ಆರ್ಥಿಕ ಬೆಳವಣಿಗೆ, ಆರ್ಥಿಕಾಭಿವೃದ್ಧಿ* ಮುಂತಾದ ಪರಿಭಾವನೆಗಳನ್ನು ಬಳಸುವುದು ವಾಡಿಕೆ. ಅರ್ಥಶಾಸ್ತ್ರದಲ್ಲಿ ಇಂದು *ಅಭಿವೃದ್ಧಿ ಅರ್ಥಶಾಸ್ತ್ರ* ಎಂಬ ಪ್ರತ್ಯೇಕ ಶಾಖೆಯು ಬೆಳೆಯುತ್ತಿದೆ. ವಿಶ್ವಬ್ಯಾಂಕು (I.B.R.D) ಇತ್ತೀಚೆಗೆ *ಅಭಿವೃದ್ಧಿ ಅರ್ಥಶಾಸ್ತ್ರ* ಕುರಿತು ಅಂತರರಾಷ್ಟ್ರೀಯ ವಾರ್ಷಿಕ ಸಮ್ಮೇಳನಗಳನ್ನು ಸಂಘಟಿಸುತ್ತಿದೆ. ಅಭಿವೃದ್ಧಿ ಅರ್ಥಶಾಸ್ತ್ರದ ಅಧ್ಯಯನ, ಸಂಶೋಧನೆ, ಬೋಧನೆ, ತರಬೇತಿ ಗಳಿಗೆ ಮೀಸಲಾದ ಹಲವಾರು ಅಂತರ ರಾಷ್ಟ್ರೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ವಿಶ್ವದ ನೂರಾರು ವಿಶ್ವವಿದ್ಯಾಲಯಗಳಲ್ಲಿ *ಅಭಿವೃದ್ಧಿ ಅರ್ಥಶಾಸ್ತ್ರ*ದ ಪ್ರತ್ಯೇಕ ವಿಭಾಗಗಳೇ ಪ್ರಾರಂಭವಾಗಿವೆ. ಭಾರತದಲ್ಲೂ ಅಭಿವೃದ್ಧಿ ಬಗ್ಗೆ ಅಧ್ಯಯನ, ಸಂಶೋಧನೆ ನಡೆಸುತ್ತಿರುವ ಹಲವಾರು ವಿಶೇಷ ಅಧ್ಯಯನ ಸಂಸ್ಥೆಗಳು ಹಲವಾರು ದಶಕಗಳಿಂದ ಕೆಲಸಮಾಡುತ್ತಿವೆ. ಪ್ರಾರಂಭದಲ್ಲಿ ಅರ್ಥಶಾಸ್ತ್ರದ ನೊಬಲ್ ಬಹುಮಾನವನ್ನು ಮೂಲಧಾರೆ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಸೈದ್ಧಾಂತಿಕ ಆವಿಷ್ಕಾರಗಳಿಗೆ ಮಾತ್ರ ನೀಡಲಾಗುತ್ತಿತ್ತು. ೧೯೭೯ರಲ್ಲಿ ಪ್ರಥಮಬಾರಿಗೆ ಸರ್. ಆರ್ಥರ್ ಲಿವೀಸ್ ಹಾಗೂ ಷುಲ್ಜ್‌ರವರುಗಳಿಗೆ ಅಭಿವೃದ್ಧಿ ಅರ್ಥಶಾಸ್ತ್ರಕ್ಕೆ ನೀಡಿದ ಕಾಣಿಕೆಯನ್ನು ಮನ್ನಿಸಿ ಅರ್ಥಶಾಸ್ತ್ರದ ನೋಬಲ್ ಬಹುಮಾನ ನೀಡಲಾಯಿತು. ಹೀಗೆ ಅಭಿವೃದ್ಧಿ ಅರ್ಥಶಾಸ್ತ್ರವು ತನ್ನ ಅಸ್ತಿತ್ವವನ್ನು ಪ್ರತಿಷ್ಠಾಪಿಸಿಕೊಂಡಿತು.

ಅಭಿವೃದ್ಧಿ ಬಗ್ಗೆ ಅಭಿವೃದ್ಧಿಶೀಲ ಹಾಗೂ ಅಭಿವೃದ್ಧ ಆರ್ಥಿಕತೆಗಳೆರಡಲ್ಲೂ ಈ ಶತಮಾನದ ನಾಲ್ಕು- ಐದನೇ ದಶಕದಿಂದಲೂ ತೀವ್ರ ಆಸಕ್ತಿ ಇರುವುದನ್ನು ಕಾಣಬಹುದಾಗಿದೆ. ಅಭಿವೃದ್ಧಿ ಶೀಲ ಆರ್ಥಿಕತೆಗಳಲ್ಲಿ ಅಭಿವೃದ್ಧಿ ಬಗೆಗಿನ ಆಸಕ್ತಿ ಸಹಜವಾದುದು. ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಾವುವು? ಅಭಿವೃದ್ಧಿಗಿರುವ ತೊಡಕುಗಳಾವುವು? ಅಭಿವೃದ್ಧಿ ಹಿಂದಿನ ಚಾಲಕ ಶಕ್ತಯಾವುವು? ಅಭಿವೃದ್ಧಿ ಯಾರಿಗಾಗಿ- ಮುಂತಾದ ಪ್ರಶ್ನೆಗಳು ಅಭಿವೃದ್ಧಿ ಶೀಲ ಆರ್ಥಿಕತೆಗಳಿಗೆ ಬದುಕು ಸಾವಿನ ಪ್ರಶ್ನೆಗಳಾಗಿವೆ. ಈ

ಆರ್ಥಿಕತೆಗಳು ಬಡತನ, ಹಸಿವು, ನಿರುದ್ಯೋಗ, ಅನಾರೋಗ್ಯಗಳ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಅಭಿವೃದ್ಧಿಯೆಂಬ ಮಹಾಸಾಗರವನ್ನಾಗಲೇ ದಾಟಿ ದಡ ಸೇರಿರುವ ಅಭಿವೃದ್ಧ ಆರ್ಥಿಕತೆಗಳೂ ಸಹ ಅಭಿವೃದ್ಧಿ ಬಗ್ಗೆ ಅತೀವ ಕುತೂಹಲ ಹೊಂದಿವೆ. ಈ ಆರ್ಥಿಕತೆಗಳಲ್ಲಿ ಈಗಾಗಲೇ ಸಾಧಿಸಿರುವ ಅಭಿವೃದ್ಧಿಯನ್ನು ಹೇಗೆ ಕಾಯ್ದುಕೊಳ್ಳುವುದು ಎಂಬುದು ದೊಡ್ಡ ಸಮಸ್ಯೆಯಾಗಿದೆ. ಈ ಆರ್ಥಿಕತೆಗಳು ಅಭಿವೃದ್ಧಿಯ *ಸ್ಥಿರಗತಿ* ಏರಿಕೆ ಬಗ್ಗೆ ಮಾತನಾಡುತ್ತಿವೆ.

ಪ್ರಥಮ, ದ್ವಿತೀಯ ಹಾಗೂ ತೃತೀಯ ಜಗತ್ತಿನ ರಾಷ್ಟ್ರಗಳು

ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಪಾಶ್ಚಿಮಾತ್ಯ ಆರ್ಥಿಕತೆಗಳನ್ನು *ಪ್ರಥಮ ಜಗತ್ತಿನ ರಾಷ್ಟ್ರಗಳು* ಎಂದು ಕರೆಯಲಾಗಿದೆ. ಅಭಿವೃದ್ಧಿ ಹೊಂದಿದ ಸಮಾಜವಾದಿ ದೇಶಗಳನ್ನು *ದ್ವಿತೀಯ ಜಗತ್ತಿನ ರಾಷ್ಟ್ರಗಳು* ಎಂದು ಕರೆಯಲಾಗಿದೆ. ಐತಿಹಾಸಿಕವಾಗಿ ವಿಶ್ವದಲ್ಲಿ ಅಭಿವೃದ್ಧಿಯನ್ನು ಪ್ರಥಮ ಬಾರಿಗೆ ಸಾಧಿಸಿಕೊಂಡ ದೇಶಗಳು ಪಾಶ್ಚಿಮಾತ್ಯ ಬಂಡವಾಳಶಾಹಿ ಆರ್ಥಿಕತೆಗಳಾಗಿವೆ. ೧೮-೧೯ನೇ ಶತಮಾನಗಳಲ್ಲಿ ಕೈಗಾರಿಕಾ ಕ್ರಾಂತಿಯ ಮೂಲಕ ಇಂಗ್ಲೆಂಡು ಇಂತಹ ಅಭಿವೃದ್ಧಿಯನ್ನು ಸಾಧಿಸಿಕೊಂಡರೆ ೧೯ನೇ ಶತಮಾನದ ಅಂತ್ಯ ಹಾಗೂ ೨೦ನೇ ಶತಮಾನದ ಆರಂಭದ ದಶಕಗಳಲ್ಲಿ ಅಭಿವೃದ್ಧಿ ಕ್ರಿಯೆಯು ಉತ್ತರ ಅಮೇರಿಕಾ, ಜಪಾನ್ ಮುಂತಾದ ದೇಶಗಳಿಗೆ ಹಬ್ಬಿತು. ಇವೆಲ್ಲವೂ ಪ್ರಥಮ ಜಗತ್ತಿನ ರಾಷ್ಟ್ರಗಳೆನ್ನಿಸಿಕೊಂಡಿವೆ.

ಈ ಅಭಿವೃದ್ಧಿಯ ಪರಿಧಿಯೊಳಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಎರಡನೇ ಹಂತದಲ್ಲಿ ಪ್ರವೇಶಿಸಿದ ಆರ್ಥಿಕತೆಗಳೆಂದರೆ ಸಮಾಜವಾದಿ ದೇಶಗಳಾಗಿವೆ. ಸೋವಿಯಟ್ ರಷ್ಯಾದ ನೇತೃತ್ವದಲ್ಲಿ ಹಲವಾರು ಪೂರ್ವ ಯುರೋಪ್ ದೇಶಗಳು ಸಮಾಜವಾದಿ ವ್ಯವಸ್ಥೆಯ ಮೂಲಕ ಅಭಿವೃದ್ಧಿ ಪಥದಲ್ಲಿ ಸಾಗಿ *ದ್ವಿತೀಯ ಜಗತ್ತಿನ ರಾಷ್ಟ್ರಗಳು* ಎನ್ನಿಸಿಕೊಂಡಿವೆ. ನಿಜವಾಗಿಯೂ ಅಭಿವೃದ್ಧಿಯು ಸಮಸ್ಯೆಯಾಗಿರುವುದು, ಒಗಟಾಗಿರುವುದು, ರಹಸ್ಯವಾಗಿರುವುದು, ಕೈಗೆಟುಕದ ಗುರಿಯಾಗಿರುವುದು ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಾ ಪ್ರದೇಶದ ಅಭಿವೃದ್ಧಿ ಶೀಲ ಆರ್ಥಿಕತೆಗಳಲ್ಲಿ ಎಂಬುದನ್ನು ಹೇಳಬೇಕಾದ ಅವಶ್ಯಕತೆ ಇಲ್ಲ. ಈ ಪ್ರದೇಶದ ದೇಶಗಳಲೆಲ್ಲಾ ಎರಡನೆಯ ಮಹಾಯುದ್ಧಯ ನಂತರ ವಸಾಹತುಶಾಹಿ ಸಂಕೋಲೆಯಿಂದ ಬಿಡುಗಡೆ ಹೊಂದಿ ಸ್ವತಂತ್ರ ರಾಷ್ಟ್ರಗಳಾಗಿ ರೂಪುಗೊಂಡಿವೆ. ಅಭಿವೃದ್ಧಿ ಪಥದಲ್ಲಿ ಅಂಬೆಗಾಲಿಡುತ್ತಿರುವ ಈ ಆರ್ಥಿಕತೆಗಳು *ತೃತೀಯ ಜಗತ್ತಿನ ರಾಷ್ಟ್ರಗಳು* ಎನಿಸಿಕೊಂಡಿವೆ.

ಈ ರೀತಿಯ ಪ್ರಥಮ, ದ್ವಿತಿಯ ಹಾಗೂ ತೃತೀಯ ಎಂಬ ವರ್ಗೀಕರಣದಲ್ಲಿ ಇಂದು ಹೆಚ್ಚಿನ ಅರ್ಥವೇನೂ ಉಳಿದಿಲ್ಲ. ಏಕೆಂದರೆ ಸಮಾಜವಾದಿ ವ್ಯವಸ್ಥೆಯ ಪ್ರತಿನಿಧಿಯಂತಿದ್ದ ಸೋವಿಯಟ್‌ರಷ್ಯಾ ಒಕ್ಕೂಟ ವಿಘಟನೆ ಹೊಂದಿದೆ. ಉಳಿದ ಹಲವಾರು ಸಮಾಜ

ವಾದಿ ಆರ್ಥಿಕತೆಗಳು ಮಾರುಕಟ್ಟೆ ವ್ಯವಸ್ಥೆಯಾಗಿ ಪರಿವರ್ತನೆಗೊಳ್ಳುತ್ತಿವೆ. ವಿಶ್ವಾರ್ಥಿಕತೆ (Global eceromy) ಬಗ್ಗೆ ಇಂದು ದೇಶಗಳೆಲ್ಲಾ ಮಾತಾಡುತ್ತಿವೆ. ಶೀತಲಸಮರ ಕೊನೆಗೊಂಡಿದೆ. ಅಲಿಪ್ತನೀತಿಯು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದಿದೆ. ಮಾರುಕಟ್ಟೆಪರವಾದ ಆರ್ಥಿಕನೀತಿಯ ವ್ಯಾಮೋಹಕ್ಕೆ ಬಹಳಷ್ಟು ದೇಶಗಳ ಬಲಿಯಾಗಿವೆ. *ಗ್ಲೊಬಲೈಜೇಶನ್* ಎಂಬುದು ಇಂದು ವೇದವಾಕ್ಯವಾಗಿಬಿಟ್ಟಿದೆ. ಈ ಬದಲಾಗುತ್ತಿರುವ ವಿಶ್ವದ ವ್ಯವಸ್ಥೆಯ ಹಿನ್ನೆಲೆಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಎಂಬ ವರ್ಗೀಕರಣಕ್ಕೆ ಯಾವುದೇ ಮಹತ್ವ ಉಳಿದಿಲ್ಲ.

ಆದರೂ ಸಹ ತೃತೀಯ ಜಗತ್ತಿನ ರಾಷ್ಟ್ರಗಳ ಗುಂಪಿಗೆ ಒಂದು ಅಸ್ತಿತ್ವವಿದೆ. ಈ ಗುಂಪಿನ ಆರ್ಥಿಕತೆಗಳ ಮೂಲಭೂತ ಸಮಸ್ಯೆಗಳು, ಆ ಸಮಸ್ಯೆಗಳ ಸಂಕೀರ್ಣತೆ? ಸಾಮಾಜಿಕ ಸ್ವರೂಪ, ವಸಾಹತುಶಾಹಿ ಹಿನ್ನೆಲೆ ಮುಂತಾದವುಗಳ ದೃಷ್ಟಿಯಿಂದ ಸಮಾನ ಗುಣವಿಶೇಷಣಗಳನ್ನು ಹೊಂದಿವೆ. ಅಭಿವೃದ್ಧಿ ಎಂಬುದು ನಿಜವಾಗಿ ಅನ್ವಯವಾಗಬೇಕಾಗಿರುವುದು ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಮಾತ್ರ, ಅಭಿವೃದ್ಧಿಯ ಜರೂರು ಇರುವುದು ಇಲ್ಲಿಯೆ! ಅಭಿವೃದ್ಧಿಗೊಂದು ಸಾರ್ಥಕ್ಯ ಇರುವುದು ಈ ದೇಶಗಳಲ್ಲಿಯೇ! ತೀವ್ರತರವಾದ ಹಾಗೂ ಬೃಹತ್ ಪ್ರಮಾಣದ ಬಡತನ, ನಿರುದ್ಯೋಗ, ಹಸಿವುಗಳು ಕಾಡುತ್ತಿರುವುದು ಈ ದೇಶಗಳನ್ನೇ! ಅಭಿವೃದ್ಧಿಗೆ ಜಟಿಲವಾದ ಕಂಟಕ - ತೊಡಕುಗಳಿರುವುದು ಈ ದೇಶಗಳಲ್ಲೇ! ಈ ಆರ್ಥಿಕತೆಗಳಲ್ಲಿ ರಾಷ್ಟ್ರೀಯ ವರಮಾನದ ಏರಿಕೆಯೊಂದೇ ಸಮಸ್ಯೆಗೆ ಪರಿಹಾರವೊದಗಿಸಲು ಸಾಧ್ಯವಿಲ್ಲ. ರಾಷ್ಟ್ರೀಯ ವರಮಾನದ ಏರಿಕೆಯ ಜೊತೆಗೆ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ವ್ಯವಸ್ಥೆಯಲ್ಲಿನ ಪರಿವರ್ತನೆಯ ಅವಶ್ಯಕತೆಯೂ ಇದೆ. ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಭಿವೃದ್ಧಿ ಎಂಬುದು ಕೇವಲ ಆರ್ಥಿಕ ಸಮಸ್ಯೆಯಾಗಿ ಉಳಿದಿಲ್ಲ.

ಸಾಂಪ್ರದಾಯಿಕವಾಗಿ ಅರ್ಥಶಾಸ್ತ್ರದಲ್ಲಿ ರೂಢಿಯಲ್ಲಿರುವ *ಆರ್ಥಿಕ ಅಭಿವೃದ್ಧಿ, ಆರ್ಥಿಕಾಭಿವೃದ್ಧಿ, ಅಭಿವೃದ್ಧಿ ಅರ್ಥಶಾಸ್ತ್ರ, ಆರ್ಥಿಕ ಬೆಳವಣಿಗೆ* ಮುಂತಾದ ಶೀರ್ಷಿಕೆಗಳನ್ನು ಬಳಸಲು ನನಗೆ ಇಷ್ಟವಿಲ್ಲ. ಏಕೆಂದರೆ ಅವು ಸಮಸ್ಯೆಗೆ ಸೀಮಿತ ಚೌಕಟ್ಟನ್ನು ಹಾಕಿಬಿಡುತ್ತವೆ. ಆದ್ದರಿಂದ ನಾನು ಇದನ್ನು *ಅಭಿವೃದ್ಧಿ* ಎಂದಷ್ಟೆ ಕರೆಯಲು ಇಚ್ಛಿಸುತ್ತೇನೆ. ಅಭಿವೃದ್ಧಿಯ ಹಿಂದೆ ಅಥವಾ ಮುಂದೆ ಆರ್ಥಿಕ ಅಥವಾ ಅರ್ಥಶಾಸ್ತ್ರ ಎಂಬ ವಿಶೇಷಣವನ್ನು ಹಚ್ಚುವುದು ನನಗೆ ಇಷ್ಟವಿಲ್ಲ. ಅಭಿವೃದ್ಧಿಯು ಸಾರಸಗಟಾಗಿ ಆರ್ಥಿಕ ಕ್ರಿಯೆಯಾಗಿ ಪರಿಗಣಿಸಲ್ಪಟ್ಟಿದ್ದಕ್ಕೆ ಒಂದು ಕಾರಣವಿದೆ.

ಅಭಿವೃದ್ಧಿಗೆ ಸಂಬಂಧಿಸಿದ ಅಧ್ಯಯನ, ಸಂಶೋಧನೆ, ಸಂವಾದ, ಬೋಧನೆಗಳೆಲ್ಲಾ ಸಾಂಪ್ರದಾಯಿಕ ಅರ್ಥಶಾಸ್ತ್ರದ ಚೌಕಟ್ಟಿನಲ್ಲೇ ನಡೆಯುತ್ತಿರುವ ವಾಸ್ತವ ನಮ್ಮ ಮುಂದಿದೆ. ಬಡತನ-ಹಸಿವು-ನಿರುದ್ಯೋಗಗಳೆಲ್ಲಾ ಅರ್ಥಶಾಸ್ತ್ರದ ನಿಯಮ, ರೇಖಾಚಿತ್ರ,

ಸೂತ್ರ, ಸಮೀಕರಣಗಳಲ್ಲಿ ವಿಶ್ಲೇಷಣೆಗೆ ತುತ್ತಾಗಿವೆ. ಅಭಿವೃದ್ಧಿಯನ್ನು ಹೀಗೆ ಅರ್ಥ ಶಾಸ್ತ್ರದ ಚೌಕಟ್ಟಿಗೆ ಸೀಮಿತಗೊಳಿಸುವುದರ ಬಗ್ಗೆ ನನ್ನದೇ ಆದ ಆಕ್ಷೇಪವಿದೆ. ಇಂತಹ ಸೀಮಿತ, ಸಂಕುಚಿತ - ಸಿದ್ಧ ದೃಷ್ಟಿಕೋನವು ಅಭಿವೃದ್ಧಿ ಬಗ್ಗೆ ಅದರಲ್ಲೂ ಅಭಿವೃದ್ಧಿ ಶೀಲ ಆರ್ಥಿಕತೆಗಳ ಸಂದರ್ಭದಲ್ಲಿ ಹೆಚ್ಚಿನ ಅರಿವು ಮೂಡಿಸಲಾರದು. ಸಮಸ್ಯೆಯ ಮೇಲೆ ಹೆಚ್ಚಿನ ಬೆಳಕು ಬೀರಲಾರವು. ಅಭಿವೃದ್ಧಿಯ ಸೂಕ್ಷ್ಮ ಪ್ರಕ್ರಿಯೆಯ ಸ್ವರೂಪದ ದರ್ಶನ ಇಲ್ಲಿ ದೊರೆಯಲಾರದು.

ನೋಬಲ್‌ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್ಡಾಲ್ ಹೇಳುವಂತೆ *ಬದುಕಿನ ಎಲ್ಲ ಸಮಸ್ಯೆಗಳೂ ಸಂಕೀರ್ಣವಾದವು. ಸಂಪ್ರದಾಯಿಕವಾಗಿ ಬೆಳೆದುಕೊಂಡು ಬಂದಿರುವ ಜ್ಞಾನ ಶಿಸ್ತುಗಳ ಚೌಕಟ್ಟಿಗೆ ಬಡತನ, ಹಸಿವು, ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ಬಂದಿಸಿ ಇದು ಆರ್ಥಿಕಸಮಸ್ಯೆ, ಇದು ಸಾಮಾಜಿಕ ಸಮಸ್ಯೆ, ಇದು ರಾಜಕೀಯ, ಇದು ಮಾನಸಿಕ ಎಂದು ನಿರ್ವಚಿಸುವುದು ಸರಿಯಲ್ಲ* (ಏಷ್ಯನ್ ಡ್ರಾಮಾ :೩೬) ಅರ್ಥಶಾಸ್ತ್ರದಲ್ಲಿ ಲಾಗಾಯ್ತಿನಿಂದ ಅಭಿವೃದ್ಧಿ ಬಗೆಗಿನ ನಂಬಿಕೆ ಎಂದರೆ ಅಭಿವೃದ್ಧಿಯು ಸಾರಾಸಗಟಾಗಿ ಒಂದು ಆರ್ಥಿಕ ಚಟುವಟಿಕೆ, ಅದೊಂದು ಆರ್ಥಿಕ ಸಮಸ್ಯೆ, ಆರ್ಥಿಕ ಕ್ರಿಯೆ. ಅಭಿವೃದ್ಧಿ ಸಿದ್ಧಾಂತಗಳು ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಲ್ಲಿ ಆರ್ಥಿಕ ಅಂಶಗಳಿಗೆ ಮಾತ್ರ ಮಹತ್ವ ನೀಡಿದ್ದಾವೆ. ಪ್ರಾಕೃತಿಕ ಸಂಪನ್ಮೂಲ (ಶ್ರಮ, ಬಂಡವಾಳ, ಹೂಟೆ, ಉಳಿತಾಯ, ತಂತ್ರಜ್ಞಾನ) ಮುಂತಾದ ಆರ್ಥಿಕ ಚಲಕಗಳ ನಡುವೆ ಅಭಿವೃದ್ಧಿ ಗಿರಕಿ ಹೊಡೆಯುತ್ತಿರುವಂತೆ ಭಾಸವಾಗುತ್ತಿದೆ. ಅಭಿವೃದ್ಧಿಯಲ್ಲಿ ಆರ್ಥಿಕ ಚಲಕಗಳ ಪಾತ್ರ ಮಹತ್ವವಾದುದು ನಿಜ ! ಆದರೆ ಅಭಿವೃದ್ಧಿಗೆ ಅದಷ್ಟೆ ಸಾಕಾಗುವುದಿಲ್ಲ. ಆರ್ಥಿಕೇತರ ಅಂಶಗಳೂ ಸಹ ಅಭಿವೃದ್ಧಿಯ ಮೇಲೆ ನಿರ್ಣಾಯಕ ಪ್ರಭಾವ ಬೀರಬಲ್ಲ ವಾಗಿವೆ. ಬದುಕಿನ ಬಗೆಗಿನ ಧೋರಣೆ, ದುಡಿಮೆ, ಅಧಿಕಾರ, ನೌಕರಶಾಹಿ, ಆಡಳಿತವ್ಯವಸ್ಥೆ, ಕುಲಸಂಬಂಧಿ ಅಂಶಗಳು, ಸಾಮಾಜಿಕ ವ್ಯವಸ್ಥೆ, ನ್ಯಾಯವ್ಯವಸ್ಥೆ, ಭೂಮಾಲೀಕತ್ವ, ಮೌಲ್ಯವ್ಯವಸ್ಥೆ, ಯಥಾ ಸ್ಥಿತಿವಾದ ಹಾಗೂ ಕ್ರಿಯಾಶೀಲ ಪ್ರಜ್ಞೆ-ಮುಂತಾದ ನೂರಾರು ಸಾಮಾಜಿಕ - ಸಾಂಸ್ಕೃತಿಕ ಅಂಶಗಳೂ ಅಭಿವೃದ್ಧಿಯನ್ನು ನಿರ್ಧರಿಸುವ ಚಲಕಗಳಾಗಿದ್ದಾವೆ. ಅಭಿವೃದ್ಧಿಶೀಲ ಆರ್ಥಿಕತೆಗಳು ಹೆಚ್ಚು ಸ್ಪಂದಿಸುವುದು ಆರ್ಥಿಕೇತರ ಅಂಶಗಳಿಗೆ ಎಂಬುದು ಅತ್ಯಂತ ಮಹತ್ವಪೂರ್ಣವಾದುದು. ಅಭಿವೃದ್ಧಿಶೀಲ ಆರ್ಥಿಕತೆಗಳಲ್ಲಿ ಅಭಿವೃದ್ಧಿಗೆ ಕಾಲ್ತೊಡಕಾಗಿ ಪರಿಣಾಮಿಸಿರುವ ಅಂಶಗಳು ಈ ಸಾಮಾಜಿಕ-ಸಾಂಸ್ಕೃತಿಕ ಅಂಶಗಳಾಗಿದ್ದಾವೆ. ಗುನ್ನಾರ್ ಮಿರ್ಡಾಲ್ ಹೇಳುವಂತೆ *"ದಕ್ಷಿಣಾ ಏಷ್ಯಾದೇಶಗಳಲ್ಲಿ ಆರ್ಥಿಕ ವ್ಯವಸ್ಥೆಯನ್ನು ಅಲ್ಲಿನ ಸಾಮಾಜಿಕ ವ್ಯವಸ್ಥೆಯಿಂದ ಬೇರ್ಪಡಿಸುವುದು ಸಾಧ್ಯವೇ ಇಲ್ಲ (ಏಷ್ಯನ್ ಡ್ರಾಮಾ :ಪು:೨೮) ಅಭಿವೃದ್ಧಿ ಸಂವಾದದಲ್ಲಿ ಆರ್ಥಿಕ ಅಂಶಗಳಿಗೆ ಪ್ರಾಪ್ತವಾದ ಈ ಜೇಷ್ಠತೆಗೆ ಕಾರಣವನ್ನು ಮಾರ್ಕ್ಸ್‌ಗೆ ಆರೋಪಿಸುವುದು ವಾಡಿಕೆ. ಹೀಗೆ ಆರೋಪಿಸುವವರಿಗೆ ಮಾರ್ಕ್ಸ್ ಗೊತ್ತಿಲ್ಲ ಅರ್ಥಶಾಸ್ತ್ರವೂ ಗೊತ್ತಿಲ್ಲ* ಎಂದು ಹೇಳ


ಬೇಕಾಗುತ್ತದೆ. ಏಕೆಂದರೆ ಬಂಡವಾಳಶಾಹಿಯ ಬೆಳವಣಿಗೆ, ಅದರ ಬಿಕ್ಕಟ್ಟು, ಅವಸಾನಗಳ ವಿಶ್ಲೇಷಣೆಯಲ್ಲಿ ಅರ್ಥಶಾಸ್ತ್ರಕ್ಕಿಂತ ಹೆಚ್ಚಿನ ವಿಚಾರಗಳನ್ನು ಅನ್ಯಜ್ಞಾನ ಶಿಸ್ತುಗಳಿಂದ ಅವನು ಪಡೆದಿದ್ದಾನೆ. ಅನ್ಯಜ್ಞಾನಶಿಸ್ತುಗಳ ಮೂಲಕ ಆರ್ಥಿಕ ಸಮಸ್ಯೆಗಳನ್ನು ವಿಶ್ಲೇಷಿಸುವ ವಿಧಾನವನ್ನು ಮೊದಲಬಾರಿಗೆ ಚೆನ್ನಾಗಿ ದುಡಿಸಿಕೊಂಡವರಲ್ಲಿ ಪ್ರಮುಖಸ್ಥಾನ ಮಾರ್ಕ್ಸ್‌ಗೆ ಸಲ್ಲಬೇಕು.

ಅರ್ಥಶಾಸ್ತ್ರದಲ್ಲಿ ಹೀಗೆ ಅಭಿವೃದ್ಧಿಯನ್ನು ಕೇವಲ ಆರ್ಥಿಕ ಅಂಶಗಳಿಗೆ ಕಟ್ಟಿಹಾಕಲು ಕಾರಣವಾದ ಅಂಶಗಳನ್ನು ಅರ್ಥಶಾಸ್ತ್ರವು ಒಂದು ಜ್ಞಾನಶಿಸ್ತಾಗಿ ಬೆಳೆದು ಬಂದ ಬಗೆಯಲ್ಲಿ ಕಾಣಬಹುದಾಗಿದೆ. ಅರ್ಥಶಾಸ್ತ್ರವು ಒಂದು ಕ್ರಮ ಬದ್ಧ ಶಿಸ್ತಾಗಿ ಬೆಳೆದದ್ದು ಪಾಶ್ಚಿಮಾತ್ಯ ದೇಶಗಳಲ್ಲಿ. ಮೂಲಧಾರೆ ಅರ್ಥಶಾಸ್ತ್ರವೆಂದು ಪರಿಗಣಿಸಲಾಗಿರುವ ನವ ಅಭಿಜಾತ ಅರ್ಥಶಾಸ್ತ್ರವು ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆ ಹಿನ್ನೆಲೆಯಲ್ಲಿ ಬೆಳೆದುಬಂತು. ಈ ಮೂಲಧಾರೆ ಅರ್ಥಶಾಸ್ತ್ರವು ಅನುಭೋಗಿ ಸಾರ್ವಭೌಮತ್ವ, ಪರಿಪೂರ್ಣ-ಪೈಪೋಟಿ, ವಿವೇಚನಾಶೀಲವರ್ತನೆ, ಗರಿಷ್ಠ ತೃಪ್ತಿ, ಗರಿಷ್ಟ ಲಾಭ, ಮಾರುಕಟ್ಟೆ ಸಮತೋಲನ, ಪರಿಮಿತ ಸಂಪನ್ಮೂಲ, ಅಪರಿಮಿತಬಯಕೆಗಳು ಮುಂತಾದ ಕಲ್ಪನೆಗಳ ಮೇಲೆ ನಿಂತಿದೆ. ಇದು ಮಾರುಕಟ್ಟೆ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ಬೆಳೆದುಬಂದಿದೆ. ಆರ್ಥಿಕತೆಗಳ ಸಾಮಾನ್ಯ ಮೂಲಭೂತ ಸಮಸ್ಯೆಗಳಾದ ಏನನ್ನು ಉತ್ಪಾದಿಸಬೇಕು. ಹೇಗೆ ಉತ್ಪಾದಿಸಬೇಕು ಹಾಗೂ ಯಾರಿಗಾಗಿ ಉತ್ಪಾದಿಸಬೇಕು ಎಂಬುದನ್ನು ಮಾರುಕಟ್ಟೆಯ ಸಹಜ ನಿರ್ದೇಶನಗಳಿಗನುಗುಣವಾದ ಕ್ರಮದಿಂದ ಪರಿಹಾರವಾಗುತ್ತವೆ ಎಂಬುದೇ ಮೂಲಧಾರೆ ಅರ್ಥಶಾಸ್ತ್ರದ ತಿರುಳಾಗಿದೆ. ಇಡೀ ಆರ್ಥಿಕತೆಯು ಮಾರುಕಟ್ಟೆಯ ಸಹಜ -ಸ್ವತಂತ್ರ ನಿರ್ದೇಶನಕ್ಕೆ ಅನುಗುಣವಾಗಿ ಕೆಲಸಮಾಡುತ್ತದೆ ಎಂಬ ಕಾರಣಕ್ಕೆ ಈ ಆರ್ಥಿಕತೆಗಳನ್ನು *ಮುಕ್ತ ಮಾರುಕಟ್ಟೆ ಆರ್ಥಿಕತೆ* ಎಂದು ಕರೆಯಲಾಗಿದೆ. ಬಂಡವಾಳಶಾಹಿ ಆರ್ಥಿಕತೆಯ ಮೂಲ ಗುಣವೇ ಮುಕ್ತ ಮಾರುಕಟ್ಟೆ ಎಂದು ಈ ಅರ್ಥಶಾಸ್ತ್ರ ವಾದಿಸಿತು. ಇಂತಹ ವ್ಯವಸ್ಥೆಯಲ್ಲಿ ಸರ್ಕಾರದ ಹಸ್ತಕ್ಷೇಪ ಕನಿಷ್ಠತಮವಿರಬೇಕು ಅಥವಾ ಈ ಹಸ್ತಕ್ಷೇಪ ವಿರಲೇ ಬಾರದು ಎಂಬ Laissez faireತತ್ವಕ್ಕೆ ಮೂಲಧಾರೆ ಅರ್ಥಶಾಸ್ತ್ರವೇ ಆಧಾರವಾಗಿತ್ತು. ಬಂಡವಾಳಶಾಹಿ ವ್ಯವಸ್ಥೆಯ ಜೊತೆ ಜೊತೆಗೆ ಈ ನವ ಅಭಿಜಾತ ಅರ್ಥಶಾಸ್ತ್ರ ಬೆಳೆದು ಬಂದಿತು. ಸರ್ಕಾರದ ಹಸ್ತಕ್ಷೇಪವಿಲ್ಲದಿದ್ದರೆ ಮಾರುಕಟ್ಟೆಯು ಹಡೆದ ಅಗೋಚರ ಹಸ್ತದ ನಿರ್ದೇಶನಗಳಿಗೆ ಅನುಗಣವಾಗಿ ಆರ್ಥಿಕತೆಯೊಂದು ತನ್ನ ಸಹಜ ಸಮತೋಲನವನ್ನು ಕಂಡುಕೊಳ್ಳುತ್ತದೆ ಎಂದು ವಾದಿಸಲಾಯಿತು. ಹಾಗೇನಾದರೂ ಒಂದು ವೇಳೆ ಆರ್ಥಿಕತೆಯಲ್ಲಿ ಅಸಮತೋಲನವುಂಟಾದರೆ ಅದು ಸರ್ಕಾರದ ಹಸ್ತಕ್ಷೇಪ ದಿಂದಾಗಿರುತ್ತದೆ ಇಲ್ಲವೆ ಮಾರುಕಟ್ಟೆಯ ಅಪರಿಪೂರ್ಣತೆಯಿಂದಾಗಿರುತ್ತದೆ ಎಂದು ಮೂಲಧಾರೆ ಅರ್ಥಶಾಸ್ತ್ರವು ನಂಬಿತ್ತು. ಸಮತೋಲನವೇ ಆರ್ಥಿಕತೆಗಳ ಸಹಜಗುಣ.

ಅಸಮತೋಲನವು ಒಂದು ವಿಕೃತಿ. ಈ ಸಮತೋಲನವು ಪೂರ್ಣೋದ್ಯೋಗ ಸ್ಥಿತಿಯಲ್ಲಿ ಸಂಭವಿಸುತ್ತದೆ ಎಂದು ಮೂಲಧಾರೆ ಅರ್ಥಶಾಸ್ತ್ರವು ವಾದಿಸಿತು.

ಮಾರುಕಟ್ಟೆ ವ್ಯವಸ್ಥೆಯಲ್ಲಿ ನಡೆಯುವ ಅನುಭೋಗ ಹಾಗೂ ಉತ್ಪಾದನೆಗಳ ನಡುವಿನ ವಿನಿಮಯ ವ್ಯವಹಾರದ ಮೂಲಕ ಆರ್ಥಿಕತೆಯು ಏನನ್ನು, ಹೇಗೆ ಹಾಗೂ ಯಾರಿಗಾಗಿ ಎಂಬ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳುತ್ತದೆ ಎಂದು ನಂಬಲಾಗಿತ್ತು ಗ್ರಾಹಕರ (ಅನುಭೋಗಿ) ಹಾಗೂ ವಿಕ್ರಯಗಾರರ (ಉತ್ಪಾದಕ) ನಡುವಿನ ವಿನಿಮಯ ವ್ಯವಹಾರದ ಮೂಲಕ ಸರಕೊಂದರ ಬೆಲೆ ಹಾಗೂ ಅದರ ಪ್ರಮಾಣ ನಿರ್ಧಾರವಾಗುವ ಪ್ರಕ್ರಿಯೆಯನ್ನೇ ಮಾರುಕಟ್ಟೆ ಎನ್ನಲಾಗಿದೆ. ಮಾರುಕಟ್ಟೆಯನ್ನು ಚಾಲನೆಯಲ್ಲಿಟ್ಟಿರುವ ಸಾಧನಗಳೆಂದರೆ ನೀಡಿಕೆ (ಉತ್ಪಾದಕ) ಹಾಗೂ ಬೇಡಿಕೆ (ಅನುಭೋಗಿ) ಈ ಕೆಳಗಿನ ಚಿತ್ರವು ಮಾರುಕಟ್ಟೆ ವ್ಯವಸ್ಥೆಯ ಕಾರ್ಯವೈಖರಿಯನ್ನು ತೋರಿಸುತ್ತದೆ.

ಮಾರುಕಟ್ಟೆ ವ್ಯವಸ್ಥೆಯಲ್ಲಿ ಬೇಡಿಕೆ-ನೀಡಿಕೆಗಳ ಮೂಲಕ ಸರಕು-ಸೇವೆಗಳ ಹಾಗೂ ಉತ್ಪಾದನಾ ಕರ್ತೃಗಳ ಬೆಲೆ ನಿಗದಿಯಾಗುವ ಕ್ರಮ.



ಈ ಚಿತ್ರದಲ್ಲಿ ಆರ್ಥಿಕ ಚಟುವಟಿಕೆಗಳು ಅಂದರೆ ಅನುಭೋಗ ಹಾಗೂ ಉತ್ಪಾದನೆ ಆವರ್ತನ ಕ್ರಮದಲ್ಲಿ ನಡೆಯುವುದನ್ನು ನೋಡಬಹುದು. ಈ ಚಿತ್ರವು ಎರಡು ವಲಯಗಳನ್ನು ತೋರಿಸುತ್ತಿದೆ.

೧. ಕೌಟುಂಬಿಕ ವಲಯ (ಅನುಭೋಗ - ಬೇಡಿಕೆ)

೨. ಉದ್ಯಮ ವಲಯ (ಉತ್ಪಾದನೆ - ನೀಡಿಕೆ)

ಈ ಚಿತ್ರವು ಎರಡು ಮಾರುಕಟ್ಟೆಗಳನ್ನು ಒಳಗೊಂಡಿದೆ.

೧. ಸರಕುಗಳ ಮಾರುಕಟ್ಟೆ (ಅನುಭೋಗಿ - ಉತ್ಪಾದಕರ ನಡುವಿನ ವಿನಿಮಯ)

೨. ಉತ್ಪಾದನಾ ಕರ್ತೃಗಳ ಮಾರುಕಟ್ಟೆ (ಉತ್ಪಾದನಾ ಕರ್ತೃಗಳಾದ ಭೂಮಿ, ಶ್ರಮ ಬಂಡವಾಳ ಹಾಗೂ ಉದ್ಯಮ ಸಾಹಸಗಳ ಬೇಡಿಕೆ - ನೀಡಿಕೆ ವಿನಿಮಯ)

ಮಾರುಕಟ್ಟೆಯ ಕಾರ್ಯ ವೈಖರಿ

ಕೌಟುಂಬಿಕ ವಲಯದಲ್ಲಿನ ಅನುಭೋಗಿಗಳ ಒಲವು ಬೇಡಿಕೆ ರೂಪದಲ್ಲಿ ಮಾರುಕಟ್ಟೆಯಲ್ಲಿ ಅಭಿವ್ಯಕ್ತವಾಗುತ್ತದೆ. ಅನುಭೋಗಿಗಳು ತಾವು ಬಯಸಿದ ಸರಕುಗಳನ್ನು ಖರೀದಿಸಲು ಸ್ವತಂತ್ರರಾಗಿದ್ದಾರೆ. ಇಲ್ಲಿ ಅನುಭೋಗಿಯೇ ಸಾರ್ವಭೌಮ. ಅನುಭೋಗಿ ಒಲವುಗಳಿಗನುಗುಣವಾಗಿ ಸರಕುಗಳ ಉತ್ಪಾದನೆಯಾಗುತ್ತದೆ. ಅನುಭೋಗಿ ಒಲವು ಮಾರುಕಟ್ಟೆಯ ಬೇಡಿಕೆಯಾಗುತ್ತದೆ. ಉತ್ಪಾದನಾವಲಯಕ್ಕೆ ಇದು ಸೂಕ್ತ ನಿರ್ದೇಶನಗಳನ್ನು ನೀಡುತ್ತದೆ.

ಉದ್ಯಮ ವಲಯವು ಮಾರುಕಟ್ಟೆಯಲ್ಲಿ ಅಭಿವ್ಯಕ್ತವಾಗುವ ಬೇಡಿಕೆಗನುಗುಣವಾಗಿ ಸರಕನ್ನು ಉತ್ಪಾದಿಸುತ್ತದೆ. ಹೀಗೆ ಉತ್ಪಾದಿಸಿದ ಸರಕು ಮಾರುಕಟ್ಟೆಗೆ ಸರಬರಾಜಾಗುತ್ತದೆ. ಇದು ಮಾರುಕಟ್ಟೆ ನೀಡಿಕೆ. ಅನುಭೋಗಿಗಳು ಬಯಸುವ ಸರಕನ್ನು ಉದ್ಯಮ ವಲಯ ಪೂರೈಸುತ್ತದೆ.

ಅನುಭೋಗಿ ಒಲವುಗಳಿಂದ ಆವಿರ್ಭಾವಗೊಂಡ ಬೇಡಿಕೆ ಹಾಗೂ ಉದ್ಯಮ ವಲಯದಿಂದ ಆವಿರ್ಭಾವಗೊಂಡ ನೀಡಿಕೆಗಳು ಪರಸ್ಪರ ವಿನಿಮಯ ಪ್ರವ್ಯಹಾರದ ಮೂಲಕ ಉತ್ಪನ್ನವೊಂದರ ಬೆಲೆ ಹಾಗೂ ಅದರ ಪ್ರಮಾಣ ನಿರ್ಧರಿಸಲ್ಪಡುತ್ತದೆ. ಬಂಡವಾಳಶಾಹಿ ವ್ಯವಸ್ಥೆ ಏನನ್ನು ಉತ್ಪಾದಿಸಬೇಕು ಎಂಬ ಸಮಸ್ಯೆಯನ್ನು ಹೀಗೆ ಅನುಭೋಗಿಗಳ ಒಲವು ಹಾಗೂ ಉದ್ಯಮ ವಲಯದ ನೀಡಿಕೆಗಳ ಪರಸ್ಪರಾನುಕ್ರಿಯೆಯ ಮೂಲಕ ಪರಿಹರಿಸಿಕೊಳ್ಳುತ್ತದೆ. ಇಂತಹ ವ್ಯವಸ್ಥೆಯಲ್ಲಿ ಅನುಭೋಗಿಗಳೇ ಸಾರ್ವಭೌಮರು ಎಂದು ನವ ಅಭಿಜಾತ ಅರ್ಥಶಾಸ್ತ್ರವು ನಂಬಿದೆ. ಅನುಭೋಗಿ ಒಲವಿಗನುಗುಣವಾಗಿ ಉತ್ಪಾದನೆ - ವ್ಯವಹಾರ ನಡೆಯುತ್ತದೆ ಎನ್ನಲಾಗಿದೆ. ಮಾರುಕಟ್ಟೆಯಲ್ಲಿ ಅನುಭೋಗಿಯು ಅತ್ಯಂತ ವಿವೇಚನಾ ಶೀಲನಾಗಿ ವರ್ತಿಸುತ್ತಾನೆ. ಅವನ ಮುಖ್ಯ ಗುರಿ ಗರಿಷ್ಠ ತೃಪ್ತಿ. ಇದರಿಂದ ಪರಿಮಿತವಾಗಿರುವ ಸಂಪನ್ಮೂಲಗಳಿಂದ ಗರಿಷ್ಟ ಪ್ರತಿಫಲ ಪಡೆಯುವುದು ಸಾಧ್ಯ. ಮೂಲಧಾರೆ ಅರ್ಥಶಾಸ್ತ್ರವು ಮನುಷ್ಯನನ್ನು *ವಿವೇಚನಾಶೀಲಪ್ರಾಣಿ* ಎಂದು ಪರಿಭಾವಿಸಿ ಅವನ ವರ್ತನೆಯ *ಕಾರಣ* - *ಪರಿಣಾಮ*ಗಳು ಸಮೀಕರಣ ಸಂಬಂಧಿಯಾದುದು - ಅವನ

ವರ್ತನೆಯು ಸದಾಕಾಲ ತರ್ಕಶುದ್ಧವಾಗಿರುತ್ತದೆ. *ಸ್ವಾರ್ಥ-ಸ್ವಹಿತ*ಗಳೇ ವಿವೇಚನಾಶೀಲ ವರ್ತನೆಯ ಹಿಂದಿನ ಚಾಲಕ ಶಕ್ತಿಗಳು. ವಿವೇಚನಾಶೀಲನಾಗಿ ವರ್ತಿಸುವವನನ್ನು *ಆರ್ಥಿಕ ಮನುಷ್ಯ* ಎಂದು ಅರ್ಥಶಾಸ್ತ್ರ ಪರಿಗಣಿಸಿದೆ. ಸಂಪ್ರದಾಯಿಕ ಅರ್ಥಶಾಸ್ತ್ರವು ಇಂತಹ ಆರ್ಥಿಕ ಮನುಷ್ಯನನ್ನು ಕುರಿತ ಅಭ್ಯಾಸವಾಗಿದೆ.

ವಿವೇಚನಾಶೀಲ ವರ್ತನೆಯೆಂದರೆ *ಸ್ವಹಿತಾಸಕ್ತಿ*ಯಿಂದ ಪ್ರೇರಿತಗೊಂಡು *ಗರಿಷ್ಟತಮ* ನಿಯಮವನ್ನು ಪಾಲಿಸುವ ವರ್ತನೆಯಾಗಿದೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಯೂ ಸ್ವಹಿತಾಸಕ್ತಿಯಿಂದ ಪ್ರೇರಿತಗೊಂಡು *ಗರಿಷ್ಟತಮ* ಗುರಿಯಸಾಧನೆಗೆ ಮಾಡುವ ಪ್ರಯತ್ನವು ಅಂತಿಮವಾಗಿ ಸಮಾಜ ಕಲ್ಯಾಣವನ್ನು ಸಾಧಿಸುತ್ತದೆ ಎಂದು ಮೂಲಧಾರೆ ಅರ್ಥಶಾಸ್ತ್ರವು ವಾದಿಸಿತು. ಸ್ವಹಿತಾಸಕ್ತಿಯೇ ಎಲ್ಲಾ ಆರ್ಥಿಕ ಚಟುವಟಿಕೆಗಳ ಹಿಂದಿನ ಚಾಲಕಶಕ್ತಿಯಾಗಿದೆ. ಸ್ವಹಿತದ ಸಾಧನೆಯಲ್ಲಿ ಪರಿಹಿತವೂ(ಸಮಾಜಹಿತ) ಅಡಗಿದೆ ಎಂದು ಇಲ್ಲಿ ನಂಬಿಕೆ. ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆಯ ಆರ್ಥಿಕ ತಳಹದಿಯು ಈ ವ್ಯಕ್ತಿವಿಶಿಷ್ಟತೆಯಾಗಿದೆ. ವೈಯುಕ್ತಿಕ ಹಿತಾಸಕ್ತಿಗಳೇ ಮುಖ್ಯ. ಈ ಎಲ್ಲಾ ಕಾರಣಕ್ಕೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅನುಭೋಗಿಗಳೇ ಸಾರ್ವಭೌಮರು ಎನ್ನಲಾಗಿದೆ.

ಮೇಲಿನ ಚಿತ್ರದಲ್ಲಿ ಸರಕು ಮಾರುಕಟ್ಟೆಗೆ ಸಮಾನಾಂತರವಾಗಿ ಉತ್ಪಾದನಾ ಕರ್ತೃಗಳ ಮಾರುಕಟ್ಟೆ ಇದೆ. ಉತ್ಪಾದನಾ ಕರ್ತೃಗಳ ಸೇವೆಯನ್ನು ಕೌಟುಂಬಿಕ ವಲಯ ಒದಗಿಸುತ್ತದೆ. ಕೌಟುಂಬಿಕ ವಲಯವು ಪೂರೈಸುವ ಉತ್ಪಾದನಾ ಕರ್ತೃಗಳ ಸೇವೆಯನ್ನು ಉದ್ಯಮ ವಲಯವು ಉತ್ಪಾದನೆಯಲ್ಲಿ ತೊಡಗಿಸುತ್ತದೆ. ಇಲ್ಲಿ ಕೌಟುಂಬಿಕ ವಲಯವು ಒದಗಿಸುವ ಉತ್ಪಾದನಾ ಕರ್ತೃಗಳ ಸೇವೆಯು ಅವುಗಳ ನೀಡಿಕೆಯಾದರೆ, ಈ ಸೇವೆಯನ್ನು ಉತ್ಪಾದನೆಯಲ್ಲಿ ತೊಡಗಿಸುವ ಉದ್ಯಮವಲಯವು ಅವುಗಳ ಬೇಡಿಕೆಯನ್ನು ಅಭಿವ್ಯಕ್ತಪಡಿಸುತ್ತದೆ.

ಅನುಭೋಗಿಗಳ ಒಲವುಗಳಿಗನುಗುಣವಾಗಿ ಉದ್ಯಮ ವಲಯವು ಉತ್ಪಾದನೆ ನಡೆಸುತ್ತದೆ. ಉದ್ಯಮ ವಲಯದ ಆವಶ್ಯಕತೆಗೆ ಬೇಕಾದ ಉತ್ಪಾದನಾ ಕರ್ತೃಗಳ ಸೇವೆಯನ್ನು ಕೌಟುಂಬಿಕ ವಲಯ ಒದಗಿಸುತ್ತದೆ. ಹೀಗೆ ಕೌಟುಂಬಿಕ ವಲಯ ಹಾಗೂ ಉದ್ಯಮ ವಲಯ ಮತ್ತು ಸರಕು ಮಾರುಕಟ್ಟೆಹಾಗೂ ಉತ್ಪಾದನಾ ಕರ್ತೃಗಳ ಮಾರುಕಟ್ಟೆ - ಇವೆಲ್ಲವೂ ಪರಸ್ಪರ ಸಂಬಂಧ ಹೊಂದಿದವುಗಳಾಗಿವೆ.

ಕೌಟುಂಬಿಕ ವಲಯದ ಅನುಭೋಗಿಗಳ ಒಲವು ಸರಕುಗಳ ಬೇಡಿಕೆಯನ್ನು ಪ್ರತಿನಿಧಿಸಿದರೆ ಉತ್ಪಾದನಾ ಕರ್ತೃಗಳ ಸೇವೆಯನ್ನು ಬಳಸಿಕೊಂಡು ಉದ್ಯಮವಲಯದ ಉತ್ಪಾದನೆಯು ನೀಡಿಕೆಯನ್ನು ಪ್ರತಿನಿಧಿಸುತ್ತದೆ. ಈ ಸರಕುಗಳ ಬೇಡಿಕೆ - ನೀಡಿಕೆಗಳು ಕ್ರಿಯಾಶೀಲವಾಗಿರುವ ಕ್ಷೇತ್ರವೇ ಸರಕು ಮಾರುಕಟ್ಟೆ.

ಕೌಟುಂಬಿಕ ವಲಯವು ಒದಗಿಸಿದ ಉತ್ಪಾದನಾ ಕರ್ತೃಗಳ ಪ್ರಮಾಣವು ಅವುಗಳ ನೀಡಿಕೆಯಾದರೆ ಅವುಗಳನ್ನು ಉದ್ಯಮದಲ್ಲಿ ನೇಮಿಸಿಕೊಳ್ಳುವ ಉದ್ಯಮವಲಯದ ಕ್ರಿಯೆಯು ಅವುಗಳ ಬೇಡಿಕೆಯಾಗಿದೆ. ಈ ಬೇಡಿಕೆ-ನೀಡಿಕೆಗಳ ಕ್ರಿಯೆಯು ಉತ್ಪಾದನಾ ಕರ್ತೃಗಳ ಸಂಭಾವನೆಗಳಾದ ಗೇಣಿ, ಕೂಲಿ, ಬಡ್ಡಿ ಮತ್ತುಲಾಭವನ್ನು ನಿರ್ಧರಿಸುತ್ತವೆ.

ಉದ್ಯಮ ವಲಯಕ್ಕೆ ಉತ್ಪಾದನಾ ಕರ್ತೃಗಳ ಸೇವೆಯನ್ನು ಒದಗಿಸಿದ ಕೌಟುಂಬಿಕ ವಲಯವು ಗೇಣಿ, ಕೂಲಿ, ಬಡ್ಡಿ, ಲಾಭಗಳ ರೂಪದಲ್ಲಿ ವರಮಾನ ಪಡೆಯುತ್ತದೆ. ಇಲ್ಲಿ ವರಮಾನವು ಉದ್ಯಮ ವಲಯದಿಂದ ಕೌಟುಂಬಿಕ ವಲಯಕ್ಕೆ ಹರಿಯುತ್ತಿದೆ. ಕೌಟುಂಬಿಕ ವಲಯವು ಹೀಗೆ ಸ್ವೀಕರಿಸಿದ ವರಮಾನವನ್ನು ಸರಕುಗಳ ಖರೀದಿಗೆ ಬಳಸುತ್ತದೆ. ಕೌಟುಂಬಿಕ ವಲಯವು ಸರಕುಗಳ ಮೇಲೆ ವ್ಯಯಿಸಿದ ವರಮಾನವು ಉದ್ಯಮವಲಯಕ್ಕೆ ಹರಿಯುತ್ತದೆ. ಹೀಗೆ ಸಕಲ ಆರ್ಥಿಕ ಚಟುವಟಿಕೆಗಳೂ ಆವರ್ತನ ಕ್ರಮದಲ್ಲಿ ಹರಿಯುತ್ತಿರುತ್ತವೆ. ಬೇಡಿಕೆ - ನೀಡಿಕೆಗಳು ವ್ಯವಸ್ಥೆಯ ಏನನ್ನು, ಹೇಗೆ ಹಾಗೂ ಯಾರಿಗಾಗಿ ಎಂಬ ಸಮಸ್ಯೆಗಳನ್ನು ಬಗೆಹರಿಸುತ್ತದೆ.

ಇಂತಹ ವ್ಯವಸ್ಥೆಯಲ್ಲಿ ಉದ್ಯಮವಲಯದ ಹಿಂದೆ ಕೆಲಸ ಮಾಡುವ ಪ್ರೇರಣೆಯು ಗರಿಷ್ಠತಮ ಲಾಭವಾದರೆ ಕೌಟುಂಬಿಕ ವಲಯದ ಹಿಂದೆ ಕೆಲಸಮಾಡುವ ಪ್ರೇರಣೆಯು ಗರಿಷ್ಠ ಪ್ರತಿಫಲ (ತೃಪ್ತಿ)ವಾಗಿದೆ. ಈ ಎರಡೂ ವಲಯಕ್ಕೆ ಸಾಮಾನ್ಯವಾದ ಗುಣವೆಂದರೆ ಸ್ವಹಿತಾಸಕ್ತಿ.

ಮಾರುಕಟ್ಟೆಯ ಕಾರ್ಯವೈಖರಿಯನ್ನು ಇಷ್ಟೊಂದು ವಿವರವಾಗಿ ಪರಿಶೀಲಿಸಲು ಕಾರಣವೆಂದರೆ ಇಂದು ವಿಶ್ವಾದ್ಯಂತ ಮಾರುಕಟ್ಟೆ ವ್ಯಾಮೋಹವು ಸ್ಫೋಟಗೊಂಡಿದೆ. ಮಾರುಕಟ್ಟೆ ವ್ಯವಸ್ಥೆಯ ಸದ್ಗುಣಗಳ ಪ್ರವಚನ ನಡೆದಿದೆ. ಇಂದು ಎಲ್ಲೆಲ್ಲೂ ದಕ್ಷತೆ, ಉತ್ಕೃಷ್ಟತೆ, ಲಾಭ, ಮುಕ್ತತೆ, ಪೈಪೋಟಿ, ಖಾಸಗೀಕರಣ, ಸ್ವಹಿತಾಸಕ್ತಿಯ ಜೇಷ್ಠತೆ, ವಿದೇಶಿಬಂಡವಾಳ ಮುಂತಾದವುಗಳ ಗುಣಗಾನ ನಡೆದಿದೆ. ಇದನ್ನು ಸಮಾಜವಾದಿ ವ್ಯವಸ್ಥೆಯ ಮೇಲೆ ಬಂಡವಾಳಶಾಹಿ ಅಮೆರಿಕೆಯು ಸಾಧಿಸಿದ ವಿಜಯ ಎಂದು ಪ್ರಚುರಪಡಿಸಲಾಗಿದೆ.

ಈ ಮಾರುಕಟ್ಟೆ ಪರ ನೀತಿಗಳ ವ್ಯಾಮೋಹದ ಅತಿಯು ನಮ್ಮ ಆರ್ಥಿಕತೆಯಲ್ಲೂ ತೀವ್ರವಾಗುತ್ತಿದೆ. ಖಾಸಗೀಕರಣಕ್ಕೆ ಹೆಚ್ಚಿನ ಮಹತ್ವ ಬಂದಿದೆ. ವಿದೇಶ ಬಂಡವಾಳಕ್ಕೆ ಬಾಗಿಲು ತೆರೆಯಲಾಗಿದೆ. ವಿದೇಶಿ ಕಂಪನಿಗಳಿಗೆ ಮುಕ್ತ ಅವಕಾಶ ನೀಡಲಾಗುತ್ತಿದೆ. ಅಂತರ್ಮುಖಿಯಾಗಿದ್ದ ಭಾರತೀಯ ಆರ್ಥಿಕತೆಯನ್ನು ಬಹಿರ್ಮುಖಿಯಾಗಿಸುವ ಪ್ರಯತ್ನ ನಡೆದಿದೆ. ವಿಶ್ವ ಆರ್ಥಿಕತೆ ಜೊತೆ ಅಂದರೆ ಬಂಡವಾಳಶಾಹಿ ಆರ್ಥಿಕತೆಗಳ ಜೊತೆ ಭಾರತದ ಆರ್ಥಿಕತೆಯನ್ನು ಸಂಯೋಜಿಸುವ ಕೆಲಸ ಇಂದು ನಡೆದಿದೆ. ಬಡತನ, ನಿರುದ್ಯೋಗ, ಹಸಿವುಗಳ ನಿವಾರಣೆ ಕಾರ್ಯಕ್ರಮಗಳು ಮೂಲೆ ಗುಂಪಾಗಿವೆ. ಉತ್ಪಾದನೆ,

ಮಾರುಕಟ್ಟೆ, ಪೈಪೋಟಿ, ಮುಕ್ತತೆ, ಉದಾರವಾದ, ಗ್ಲೋಬಲೈಜೇಶನ್, ಮುಂತಾದವುಗಳೇ ಮೂಲ ಮಂತ್ರವಾಗಿ ಬಿಟ್ಟಿವೆ.

ಈ ಮಾರುಕಟ್ಟೆ ವ್ಯವಸ್ಥೆಯ ಕಾರ್ಯ ವೈಖರಿಯನ್ನು ವಿವರವಾಗಿ ಇಲ್ಲಿ ಪರಿಶೀಲಿಸುತ್ತಿರುವುದಕ್ಕೆ ಇನ್ನೊಂದು ಕಾರಣವೂ ಇದೆ. ಅಭಿವೃದ್ಧಿ ಮೀಮಾಂಸೆಯನ್ನು ಅರ್ಥಮಾಡಿಕೊಳ್ಳಲು ಮಾರುಕಟ್ಟೆ ವ್ಯವಸ್ಥೆಯ ಕಾರ್ಯ ವೈಖರಿಯ ಅರಿವು ಬೇಕು. ಮೇಲಿನ ವಿವರಗಳ ಹಿನ್ನೆಲೆಯಲ್ಲಿ ನಾವು ಅಭಿವೃದ್ಧಿಯ ಎಲ್ಲಾ ಆಯಾಮಗಳನ್ನು ಚರ್ಚಿಸಬಹುದಾಗಿದೆ.

ಇದುವರೆಗೂ ನಾವು ವಿವರಿಸಿದ ಪಾಶ್ಚಿಮಾತ್ಯ ಸಂಪ್ರದಾಯಿಕ ಮೂಲಧಾರೆ ಅರ್ಥಶಾಸ್ತ್ರವು ಅಭಿವೃದ್ಧಿಶೀಲ ಆರ್ಥಿಕತೆಗಳ ದೃಷ್ಟಿಯಿಂದ ಉಪಯುಕ್ತವಾಗಿಲ್ಲ.

೧. ಅನುಭೋಗಿ ಸಾರ್ವಭೌಮತ್ವ ಎಂಬುದು ಕೇವಲ ಒಂದು ಭ್ರಮೆ. ಅದೊಂದು ಮಿಥ್ಯೆ. ಸರಕು ಸಂಸ್ಕೃತಿ ಹಿನ್ನೆಲೆಯಲ್ಲಿ ಅನುಭೋಗಿಯು ಮಾರುಕಟ್ಟೆಯ ದಾಸನಾಗಿದ್ದಾನೆ. ಅನುಭೋಗಿಗಳು ಎಂದರೆ ಯಾರು? ಯಾರ ಸಾರ್ವಭೌಮತ್ವ? ಅನುಭೋಗಿಗಳ ಯಾವ ಒಲವುಗಳನ್ನು ಉತ್ಪಾದನಾ ವಲಯ ಈಡೇರಿಸುತ್ತದೆ? ಪ್ರತಿಷ್ಠಿತ ಸ್ಥಾನಮಾನ ಪಡೆದ, ಉತ್ಪಾದನಾ ಸಂಪನ್ಮೂಲಗಳ ಮಾಲೀಕತ್ವ ಹೊಂದಿದ, ಉನ್ನತ ವರಮಾನದ ವರ್ಗದ ತೀಟೆಯನ್ನು ಮಾತ್ರ ಮಾರುಕಟ್ಟೆ ಈಡೇರಿಸುತ್ತದೆ. ಇಂತಹ ವ್ಯವಸ್ಥೆಯಲ್ಲಿ ಕೆಳವರ್ಗದ ಅನುಭೋಗಿಗಳ ಸ್ಥಿತಿ ಹೇಗಿರುತ್ತದೆ ಎಂದರೆ

ಬಿಟ್ಟರೊ ಕಾಡಲ್ಲಿ ಕಣ್ಣು ಕಟ್ಟಿ
ಸುತ್ತಲೂ ಬಿಗಿದಿಟ್ಟು ಮುಳ್ಳು ತಂತಿ
ಕುಡಿಯಲುಪ್ಪಿನ ನೀರು
ತಿನಲು ಬೆಂಕಿಯ ಚೂರು
ಕುಣಿಯಲೆಂದೇ ಬೇಡಿ ಕಾಲತೊಡವು (ಅಡಿಗ)

ಭಾರತದಂತಹ ಆರ್ಥಿಕತೆಯಲ್ಲಿ ಶೇ. ೨೦ರಿಂದ ೩೦ರಷ್ಟು ಉನ್ನತ ವರ್ಗ - ಜಾತಿಗಳ ಅನುಭೋಗಿಗಳ ತೆವಲುಗಳನ್ನು ಮಾತ್ರ ಉದ್ಯಮ ವಲಯ - ಮಾರುಕಟ್ಟೆ ಈಡೇರಿಸಬಲ್ಲದು. ಉಳಿದ ಶೇ. ೭೦ ರಿಂದ ೮೦ರಷ್ಟು ಬಡಜನತೆಯು ಮಾರುಕಟ್ಟೆ ಪ್ರಣೀತ ಸರಕು ಸಂಸ್ಕೃತಿಯ ಬಲಿಪಶುಗಳಾಗಿದ್ದಾರೆ. ಅನುಭೋಗಿ ಸಾರ್ವಭೌಮತ್ವದ ಮಾತು ಈ ಹಿನ್ನೆಲೆಯಲ್ಲಿ ಅರ್ಥಹೀನವಾಗಿದೆ.

೨. ಸರಕು ಮಾರುಕಟ್ಟೆಯಲ್ಲಿ ಅನುಭೋಗಿಗಳ ಬೇಡಿಕೆ ಹಾಗೂ ಉದ್ಯಮ ವಲಯದ ನೀಡಿಕೆಗಳ ಪರಸ್ಪರ ವಿನಿಮಯ ಪೈಪೋಟಿಯಿಂದ ಯೋಗ್ಯ ಬೆಲೆ ನಿರ್ಣಯವಾಗುತ್ತದೆ ಎಂಬುದು ಕೇವಲ ಊಹೆ. ಬಂಡವಾಳಶಾಹಿ ಮಾರುಕಟ್ಟೆಯನ್ನು ಉದ್ಯಮವಲಯವು

ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿಟ್ಟುಕೊಂಡಿರುತ್ತದೆ. ಅನುಭೋಗಿಗಳ ಪಾತ್ರ ನೆಪಮಾತ್ರ.

೩. ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಎಂಬುದು ಮೂಲಧಾರೆ ಅರ್ಥಶಾಸ್ತ್ರವು ಕಲ್ಪಿಸಿಕೊಂಡ ಒಂದು ಸಂಗತಿ. ಇದೊಂದು ಆದರ್ಶ. ವಾಸ್ತವಿಕವಾಗಿ ಮಾರುಕಟ್ಟೆಯು ಗೊಂದಲ ಗೋಜಲುಗಳ ಜಾಲವಾಗಿದೆ. ಅಲ್ಲಿ ಹೊಸ ಉದ್ಯಮಿ - ಉದ್ಯಮಗಳಿಗೆ ಮುಕ್ತ ಪ್ರವೇಶವಿರುತ್ತದೆ ಎನ್ನಲಾಗಿದೆ. ಆದರೆ ಈಗಾಗಲೇ ಮಾರುಕಟ್ಟೆಯನ್ನು ಪೂರ್ಣವಾಗಿ ಆಕ್ರಮಿಸಿಕೊಂಡಿರುವ-ನಿಯಂತ್ರಿಸುತ್ತಿರುವ ಬೃಹತ್ ಪ್ರಮಾಣದ ಉದ್ಯಮಗಳು ಹೊಸ ಬರ ಪ್ರವೇಶವನ್ನು ಹತ್ತಿಕ್ಕುತ್ತವೆ. ಒಂದು ರೀತಿಯಲ್ಲಿ ಏಕಸ್ವಾಮ್ಯತೆಯು ಬಂಡವಾಳಶಾಹಿ ಮಾರುಕಟ್ಟೆಯ ವಾಸ್ತವಿಕ ಲಕ್ಷಣವಾಗಿದೆ. ಇಂತಹ ಮಾರುಕಟ್ಟೆಯಲ್ಲಿ ಅನುಭೋಗಿಯು ವಿವೇಚನಾ ಶೀಲನಾಗಿ ವರ್ತಿಸಲು ಅವನಿಗೆ ಮಾರುಕಟ್ಟೆಯ ಪೂರ್ಣ ಜ್ಞಾನ ಇರಬೇಕು. ಆದರೆ ವಾಸ್ತವಿಕವಾಗಿ ಬಂಡವಾಳಶಾಹಿ ಉದ್ಯಮಿಗಳು ಹಲವಾರು ತಂತ್ರ ಕುತಂತ್ರಗಳಿಂದ ಅನುಭೋಗಿಗಳನ್ನು ಕತ್ತಲೆ ಕೂಪದಲ್ಲೇ ಇಟ್ಟಿರುತ್ತದೆ. ಇಂತಹ ಸ್ಥಿತಿಯಲ್ಲಿ ಪರಿಪೂರ್ಣ ಪೈಪೋಟಿ ಸಾಧ್ಯವೇ ಇಲ್ಲ.

೪. ಪಾಶ್ಚಿಮಾತ್ಯ ಉತ್ಪಾದನಾ ವ್ಯವಸ್ಥೆಯ ಅಂದರೆ ಮಾರುಕಟ್ಟೆ ಕೇಂದ್ರಿತ ಉತ್ಪಾದನಾ ವ್ಯವಸ್ಥೆಯ ಮುಖ್ಯ ಲಕ್ಷಣವೆಂದರೆ ಅದರ ಏಕರೂಪತೆ. ದೊಡ್ಡ ಪ್ರಮಾಣದ ಉತ್ಪಾದನೆ, ತಂತ್ರಜ್ಞಾನ ಆಧರಿತ ಉತ್ಪಾದನೆ, ಮಾರುಕಟ್ಟೆ ಆಧರಿತ ಉತ್ಪಾದನೆ- ಮೂಲಭೂತವಾಗಿ ಏಕರೂಪತೆಯಿಂದ ಕೂಡಿರುತ್ತದೆ. ಇದು ಆರ್ಥಿಕತೆಯಲ್ಲಿ ವೈವಿಧ್ಯತೆಯನ್ನು ಹಾಗೂ ವಿಕೇಂದ್ರೀಕೃತ ಉತ್ಪಾದನಾ ವ್ಯವಸ್ಥೆಯನ್ನು ನಾಶಮಾಡುತ್ತದೆ. ಇಂದು ವ್ಯಾಪಕವಾಗಿ ಕೇಳಿಬರುತ್ತಿರುವ Globalisation ನ ಹಿಂದಿರುವ ಸಿದ್ಧಾಂತವೂ ಇದೇ ಆಗಿದೆ. ಬಹು ರಾಷ್ಟ್ರೀಯ ಸಂಸ್ಥೆಗಳು (M.N.C) ಖಂಡಾಂತರ ಸಂಸ್ಥೆಗಳು (T.N.C) ಡಂಕಲ್ ಕರಡು ಪ್ರತಿ (D.D.T)ಗಳೆಲ್ಲಾ ಉತ್ಪಾದನಾ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಏಕರೂಪಗೊಳಿಸುವ ಕುತಂತ್ರದಲ್ಲಿ ತೊಡಗಿವೆ. ಈ ಕುತಂತ್ರದಲ್ಲಿ ಅಭಿವೃದ್ಧಿ ಶೀಲ ಆರ್ಥಿಕತೆಗಳೇ *ಗುಲಾಮ ಸ್ಥಿತಿಗೆ* ಇಳಿದಿರುವಾಗ *ಅನುಬೋಗಿ ಸಾರ್ವಭೌಮತ್ವ, ಪೈಪೋಟಿ ಮಾರುಕಟ್ಟೆ, ಯೋಗ್ಯ ಬೆಲೆ* ಎಂಬುದೆಲ್ಲಾ ಕೇವಲ ಕಪಟಸೂತ್ರವಾಗಿ ಬಿಡುತ್ತವೆ. ಏಕ ರೂಪತೆಯನ್ನು ವಿಶ್ವಮಟ್ಟದಲ್ಲಿ ಪ್ರತಿಷ್ಠಾಪಿಸುವ ಕುತಂತ್ರದಲ್ಲಿ ತೊಡಗಿರುವ Globalosation ಸೂತ್ರವು ಅಭಿವೃದ್ಧಿ ಶೀಲ ಆರ್ಥಿಕತೆಗಳಿಗೆ ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ.

೫. ಮಾರುಕಟ್ಟೆ ಆಧರಿತ ಉತ್ಪಾದನಾ ವ್ಯವಸ್ಥೆಯನ್ನು ಸರಕುಸಂಸ್ಕೃತಿಯ ಪೋಷಿಸುತ್ತಿದೆ. ಸರಕು ಸಂಸ್ಕೃತಿಯನ್ನು ಮಾರುಕಟ್ಟೆ ಆಧರಿತ ವ್ಯವಸ್ಥೆಯು ಪೋಷಿಸುತ್ತಿದೆ. ಪಾಶ್ಚಿಮಾತ್ಯ ಬಂಡವಾಳ ಶಾಹಿ ಆರ್ಥಿಕತೆಗಳ ಅಸ್ತಿತ್ವವು ಇಂದು

ಅಭಿವೃದ್ಧಿಶೀಲ ಆರ್ಥಿಕತೆಗಳ ಮಾರುಕಟ್ಟೆಯನ್ನು ಅವಲಂಬಿಸಿದೆ. ಅಭಿವೃದ್ಧಿಶೀಲ ಆರ್ಥಿಕತೆಗಳ ಮಾರುಕಟ್ಟೆಗಳನ್ನು ಸರಕು ಸಂಸ್ಕೃತಿಯ ಸಂಸ್ಕರಣಕ್ಕೆ ಒಳಪಡಿಸಲು ಪಾಶ್ಚಿಮಾತ್ಯ ದೇಶಗಳು ಶ್ರಮ ಪಡುತ್ತಿವೆ. ಸರಕು ಸಂಸ್ಕೃತಿಯ ಕಸಿಮಾಡಲು ಈ ದೇಶಗಳು ಅಂತರ ರಾಷ್ಟ್ರೀಯ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆ. ಮುಕ್ತತೆಯ ಹೆಸರಿನಲ್ಲಿ ಟಿ.ವಿ., ರೇಡಿಯೋ, ಪತ್ರಿಕೆ, ಸಿನಿಮಾ ಮೂಲಕ *ಸರಕು - ಸಂಸ್ಕೃತಿಯ* ಪ್ರಚಾರ ಭರದಿಂದ ಸಾಗಿದೆ. ಸರಕು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಅಭಿವೃದ್ಧಿ ಶೀಲ ಆರ್ಥಿಕತೆಗಳು ದೊಡ್ಡ ಪ್ರಮಾಣದಲ್ಲಿ ವೈಭವೋಪೇತ ಸರಕಿನ ಉತ್ಪಾದನೆಯಲ್ಲಿ ತೊಡಗಿವೆ. ಸರಕು ಸಂಸ್ಕೃತಿಯು ಇಂದು ಅಭಿವೃದ್ಧಿಯ ಅಳತೆಗೋಲಾಗಿದೆ, ಆಧುನಿಕತೆಯ ಸಾಧನವಾಗಿದೆ.

೬. ಅರ್ಥಶಾಸ್ತ್ರವು ಪ್ರಾರಂಭದಿಂದಲೂ ನಂಬಿಕೊಂಡು ಬಂದ ಒಂದು ವಿಚಾರವೆಂದರೆ *ಬಯಕೆಗಳು ಅಪರಿಮಿತ* ಹಾಗೂ ಅವುಗಳನ್ನು ಪೂರೈಸಲು ಬೇಕಾದ *ಸಾಧನ ಸಂಪನ್ಮೂಲಗಳ ಕೊರತೆ.* ಅರ್ಥಶಾಸ್ತ್ರದ ಇವೆರಡೂ ಮಿಥ್ಯೆಗಳನ್ನು ಅಭಿವೃದ್ಧಿಶೀಲ ದೇಶಗಳು ಒಪ್ಪಿಕೊಂಡಿವೆ.

ಬಯಕೆಗಳು ಅಪರಿಮಿತ ಎಂದರೆ ಯಾರ ಬಯಕೆಗಳು? ಯಾವ ಬಯಕೆಗಳು? ಸ್ವಹಿತಾಸಕ್ತಿ ಹಾಗೂ ಸ್ವಾರ್ಥ ಆಧರಿತ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಕೇವಲ ಉಳ್ಳವರ ಬಯಕೆಗಳು ಮಾತ್ರ ಅಪರಿಮಿತವಾಗಿರಲು ಸಾಧ್ಯ. ಸರಕು ಸಂಸ್ಕೃತಿಯಲ್ಲಿ ಪೂರ್ಣ ಮುಳುಗಿರುವ ಪಾಶ್ಚಿಮಾತ್ಯ ವ್ಯವಸ್ಥೆಯಲ್ಲಿ ಹಾಗೂ ಅಪರಿಮಿತ ಬಯಕೆಗಳ ಹಿನ್ನೆಲೆಯಲ್ಲಿ ಮಾತ್ರ ಸಂಪನ್ಮೂಲಗಳ ಕೊರತೆ ಉಂಟಾಗಬಹುದು. ಇಡೀ ಪ್ರಪಂಚದಲ್ಲಿ ಬಳಕೆಯಾಗುವ ಇಂಧನದಲ್ಲಿ ಶೇ ೮೦ ರಷ್ಟು ಇಂಧನವನ್ನು ಅಮೆರಿಕೆಯೊಂದೆ ಕಬಳಿಸುತ್ತಿದೆ. ಪ್ರಪಂಚದ ಸಂಪನ್ಮೂಲಗಳ ಮೇಲೆ ಪಾಶ್ಚಿಮಾತ್ಯ ಆರ್ಥಿಕತೆಗಳ ಗುತ್ತಿಗೆಯ ಹಿನ್ನೆಲೆಯಲ್ಲಿ ಸಂಪನ್ಮೂಲಗಳ ಕೊರತೆಗೆ ಯಾವುದೇ ಅರ್ಥವಿಲ್ಲ.

ಅಭಿವೃದ್ಧಿ ಶೀಲ ಆರ್ಥಿಕತೆಗಳ ಸಂಪನ್ಮೂಲಗಳೂ ಸಹ ಪಾಶ್ಚಿಮಾತ್ಯ ಆರ್ಥಿಕತೆಗಳ ಸೇವೆಗೆ ಮೀಸಲಾಗಿರುವ ವಾಸ್ತವ ನಮ್ಮ ಮುಂದಿದೆ. ಗ್ಲೋಬಲೈಸೇಶನ್ ಮತ್ತು ಮುಕ್ತ ಮಾರುಕಟ್ಟೆ ಹೆಸರಿನಲ್ಲಿ ಇಂದು ನಡೆಯುತ್ತಿರುವ ಸುಧಾರಣೆ ಹಿಂದೆ ಅಭಿವೃದ್ಧಿಶೀಲ ಆರ್ಥಕತೆಗಳ ಮಾರುಕಟ್ಟೆಯನ್ನು ಅಭಿವೃದ್ಧ ಪಾಶ್ಚಿಮಾತ್ಯ ದೇಶಗಳು ವಶ ಮಾಡಿಕೊಳ್ಳುವ ಹುನ್ನಾರವಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಾವು *ಅಪರಿಮಿತ ಬಯಕೆ* ಹಾಗೂ *ಕೊರತೆಯಿಂದಿರುವ ಸಂಪನ್ಮೂ ಲಗಳ* ವಿಚಾರವನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

*ಸಂಪನ್ಮೂ ಲಗಳ ಕೊರತೆ*ಯೆಂಬ ಭೂತವನ್ನು ಪಾಶ್ಚಿಮಾತ್ಯ ದೇಶಗಳು ಹುಟ್ಟಿಹಾಕವೆ. ಮೂಲಧಾರೆ ಅರ್ಥಶಾಸ್ತ್ರವು ಸಂಪೂರ್ಣವಾಗಿ ಇವೆರಡು ನಂಬಿಕೆಗಳ ಮೇಲೆ ನಿಂತಿದೆ. ಸಂಪನ್ಮೂಲಗಳು ಕೊರತೆಯಿಂದಿರುವುದರಿಂದ ಅವುಗಳ ಬಳಕೆಯಲ್ಲಿ *ವಿವೇಚನಾ ಶೀಲ ಆಯ್ಕೆ* ಪಾತ್ರವನ್ನು ಅರ್ಥಶಾಸ್ತ್ರವು ಒಂದು ಸಿದ್ಧಾಂತವಾಗಿ ರೂಪಿಸಿದೆ. ಆದರೆ ವಾಸ್ತವ

ವಾಗಿ ಸಂಪನ್ಮೂಲಗಳ ಕೊರತೆ ಎಂಬ ನಂಬಿಕೆಯು ಪಾಶ್ಚಿಮಾತ್ಯ ಬಂಡವಾಳ ಶಾಹಿಯು *ಸ್ವಹಿತ* ಹಾಗೂ *ಸ್ವಾರ್ಥ* ಕ್ಕಾಗಿ ಪೋಷಿಸಿಕೊಂಡು ಬಂದುದಾಗಿದೆ. ಸಾಧನ - ಸಂಪನ್ಮೂಲಗಳ ಕೊರತೆಯನ್ನು ನಾವು ಅವುಗಳ ಮಾಲೀಕತ್ವ ಅವುಗಳ ಅಸಮ ಹಂಚಿಕೆ, ಅವುಗಳ ಮೇಲೆ ಪಾಶ್ಚಿಮಾತ್ಯ ದೇಶಗಳು ಸಾಧಿಸಿರುವ ಗುತ್ತಿಗೆ, ಅವುಗಳ ಮೇಲೆ ಹಕ್ಕು ಕಳೆದು ಕೊಳ್ಳುತ್ತಿರುವ ಅಭಿವೃದ್ಧಿ ಶೀಲ ಆರ್ಥಿಕತೆಗಳು - ಈ ಎಲ್ಲಾ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.

ನವವಸಾಹತುಶಾಹಿ - ನವಸಾಮ್ರಾಜ್ಯಶಾಹಿಯ ವಿಜೃಂಭಣೆ

ಇಂದು ನವ ವಸಾಹತುಶಾಹಿ - ನವ ಸಾಮ್ರಾಜ್ಯಶಾಹಿಯು ತನ್ನೆಲ್ಲಾ ಶಕ್ತಿ - ಸಾಮರ್ಥ್ಯವನ್ನು ಒಗ್ಗೂಡಿಸಿಕೊಂಡು ಅಭಿವೃದ್ಧಿ ಶೀಲ ಆರ್ಥಿಕತೆಗಳ ಮೇಲೆ ಆಕ್ರಮಣ ನಡೆಸಿದೆ. ಸೋವಿಯತ್ ರಷ್ಯಾದ ವಿಘಟನೆ ನಂತರ ಈ ಆಕ್ರಮಣಕ್ಕೆ ನಿಯಂತ್ರಣವೆ ಇಲ್ಲದಂತಾಗಿದೆ. ರಷ್ಯಾ ಒಕ್ಕೂಟದ ವಿಘಟನೆ ಪೂರ್ವ ಯುರೋಪಿಯನ್ ದೇಶಗಳಲ್ಲಿನ ಕಮ್ಯುನಿಸಂನ ಪತನವನ್ನು ಅಮೆರಿಕೆಯು *ಬಂಡವಾಳಶಾಹಿಯ ವಿಜಯವೆಂದೇ* ತಿಳಿದಿದೆ. ಅಭಿವೃದ್ಧಿಶೀಲ ಆರ್ಥಿಕತೆಗಳ ಮೇಲಿನ ಅಮೇರಿಕಾ ಹಾಗೂ ಮಿತ್ರ ರಾಷ್ಟ್ರಗಳ ಪ್ರಾಬಲ್ಯವು ಪೂರ್ಣಗೊಂಡಂತಾಗಿದೆ. ಅಭಿವೃದ್ಧಿಶೀಲ ಆರ್ಥಿಕತೆಗಳು ಇಂದು ಸಂಪೂರ್ಣವಾಗಿ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಅವಲಂಬಿಸಿಕೊಳ್ಳುವ ಸ್ಥಿತಿಗೆ ಬಂದಿವೆ. ವಿಶ್ವಬ್ಯಾಂಕ್ ಹಾಗೂ I.M.Fಗಳ ಮೂಲಕ ಅಂತರಾಷ್ಟ್ರೀಯ ಹಣಕಾಸು ನೆರವಿನ ಹೆಸರಿನಲ್ಲಿ ಸಾಮ್ರಾಜ್ಯಶಾಹಿ ವ್ಯವಸ್ಥೆ ತನ್ನೆಲ್ಲಾ ಅಸ್ತ್ರಗಳನ್ನು ಪ್ರಯೋಗಿಸುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಖಂಡಾಂತರ ಕಂಪನಿಗಳು (MNC and TNC) ಹಿಂದಿನ ಈಸ್ಟ್ ಇಂಡಿಯಾ ಕಂಪನಿಯ ವಾರಸುದಾರರಂತೆ ವರ್ತಿಸುತ್ತಿವೆ. ವಸಾಹತುಶಾಹಿ ಸಂದರ್ಭದಲ್ಲಿ ಪ್ರಚಾರದಲ್ಲಿದ್ದ (White mans burden) ಪ್ರಜ್ಞೆಯೇ ಇಂದು *ಮುಕ್ತ ಮಾರುಕಟ್ಟೆ - ಗ್ಲೊಬಲೈಸೇಷನ್*‌ರೂಪದಲ್ಲಿ ಕೆಲಸಮಾಡುತ್ತಿರುವಂತೆ ಭಾಸವಾಗುತ್ತಿದೆ. ಅಭಿವೃದ್ಧಿಶೀಲ ದೇಶಗಳನ್ನು ಕಾಡುತ್ತಿರುವ ಬಡತನ, ನಿರುದ್ಯೋಗ, ಅನಾರೋಗ್ಯ, ಹಸಿವು ಮುಂತಾದ ಸಮಸ್ಯೆಗಳ ಬಗ್ಗೆ ಚಿಂತಿಸುವುದು, ವಿಶ್ಲೇಷಿಸುವುದು ಹಾಗೂ ಅವುಗಳ ನಿವಾರಣೆಗೆ ಪರಿಹಾರ ಕ್ರಮರೂಪಿಸುವುದು-ಇವುಗಳನ್ನೆಲ್ಲಾ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ದೇಶಗಳು ತಮ್ಮ *ಪವಿತ್ರ* ಕರ್ತವ್ಯ ಮಾಡಿಕೊಂಡು ಬಿಟ್ಟಿವೆ. ಈ ಪವಿತ್ರ ಕಾರ್ಯಕ್ಕೆ ಅವರನ್ನು ದೇವರೇ ನಿಯಾಮಿಸಿದ್ದಾನೆ ಎಂಬ ಭಾವನೆ ಇದ್ದರೂ ಇರಬಹುದು.

ಬಂಡವಾಳಶಾಹಿ ವ್ಯವಸ್ಥೆಯು ಬಿಕ್ಕಟ್ಟನ್ನು ಎದುರಿಸುವ ಸಂದರ್ಭದಲ್ಲೆಲ್ಲಾ ವಸಾಹತುಶಾಹಿ - ಸಾಮ್ರಾಜ್ಯಶಾಹಿ ನೀತಿಗಳಿಗೆ ಮೊರೆ ಹೋಗಿರುವ ಇತಿಹಾಸ ಇಂದು ನಮ್ಮ ಮುಂದಿದೆ. ಕೈಗಾರಿಕಾ ಕ್ರಾಂತಿಯು ಸೃಷ್ಟಿಸಿದ *ಉತ್ಪಾದನೆ ಆಸ್ಫೋಟ*ವನ್ನು ನಿಭಾಯಿಸುವ ಸಲುವಾಗಿ ವಸಾಹತುಗಳ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳಬೇಕಾಯಿತು. ಆಫ್ರಿಕಾ,

ಲ್ಯಾಟಿನ್ ಅಮೆರಿಕಾ ಹಾಗೂ ಏಷ್ಯಾಖಂಡಗಳ ದೇಶಗಳು ಯುರೋಪಿನಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಗೆ ಬೇಕಾಗಿದ್ದ ಸಾಧನೆ - ಸಾಮಗ್ರಿ - ಸಂಪನ್ಮೂಲಗಳನ್ನು ಸರಬರಾಜು ಮಾಡುವ ಮೂಲಗಳಾದವು. ಇದರ ಜೊತೆಗೆ ಯುರೋಪಿನ ಉತ್ಪನ್ನಗಳಿಗೆ ಈ ವಸಾಹತುಗಳು ಮಾರುಕಟ್ಟೆಯೊದಗಿಸಿದವು. ತಮ್ಮ ಉತ್ಪನ್ನಗಳ ಮಾರಾಟ ಹಾಗೂ ಉತ್ಪಾದನೆಯನ್ನು ಅಭಾದಿತವಾಗಿಟ್ಟುಕೊಳ್ಳುವ ಸಲುವಾಗಿ ವಸಾಹತುಗಳಲ್ಲಿದ್ದ ಮೂಲ ಉತ್ಪಾದನಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶಮಾಡಲಾಯಿತು. ಕರಕುಶಲ ಕಸುಬು - ಗುಡಿಕೈಗಾರಿಕೆಗಳು ನಮ್ಮ ದೇಶದಲ್ಲಿ ವಸಾಹತುಶಾಹಿ ಆಡಳಿತದಲ್ಲಿ ಪೂರ್ತಿ ನೆಲ ಕಚ್ಚಿದವು. ಹೀಗೆ ಪಾಶ್ಚಿಮಾತ್ಯ ಬಂಡವಾಳಶಾಹಿಯು ೧೮ - ೧೯ನೇ ಶತಮಾನಗಳಲ್ಲಿ ಬಿಕ್ಕಟ್ಟನ್ನು ವಸಾಹತುಶಾಹಿ ನೀತಿಯ ಮೂಲಕ ಪರಿಹರಿಸಿಕೊಂಡಿತು.

೧೯೩೦ರ ದಶಕದಲ್ಲಿ ಉಂಟಾದ *ಮಹಾಆರ್ಥಿಕ ಸಂಕಷ್ಟವು* ಬಂಡವಾಳಶಾಹಿ ವ್ಯವಸ್ಥೆಯನ್ನು ನಿರ್ನಾಮ ಮಾಡುವಷ್ಟು ಅಪಾಯಕಾರಿಯಾಗಿತ್ತು ಆದರೆ ಬಂಡವಾಳಶಾಹಿಯು ಈ ಅವಧಿಯಲ್ಲಿ ತನ್ನನ್ನು ತಾನೆ ಸುಧಾರಿಸಿಕೊಂಡಿತು. ಲಾರ್ಡ್‌ಕೇನ್ಸ್‌ರವರ ಕ್ರಾಂತಿಕಾರಿ ಸಿದ್ಧಾಂತವು ಬಂಡವಾಳಶಾಹಿಯನ್ನು ವಿನಾಶದಿಂದ ಕಾಪಾಡಿತು. ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಸರ್ಕಾರ ಅಗಾಧ ಹಣವೆಚ್ಚಮಾಡಿ ಆರ್ಥಿಕ ಪುನಶ್ಚೇತನ ಉಂಟುಮಾಡಬಹುದೆಂಬ ವಿಚಾರ ಒಂದು ಕ್ರಾಂತಿಯಾಗಿ ಪರಿಣಾಮಿಸಿತು. ನಿರುದ್ಯೋಗ, ಹಸಿವು, ಬಡತನಗಳನ್ನು ನಿವಾರಿಸಲು ಸರ್ಕಾರ ಹೆಚ್ಚಿನ ಜವಾಬ್ದಾರಿ ಹೊರಬೇಕೆಂಬ ವಿಚಾರ ಹೆಚ್ಚು ಗಟ್ಟಿಗೊಂಡಿತು. ಸರ್ಕಾರ ಇಂತಹ ಕ್ರಮಗಳನ್ನು ಕೈಗೊಳ್ಳುವುದು ಒಂದು ಉದಾತ್ತ ಕ್ರಮ ಎಂಬ ಭಾವನೆಯೂ ಬೆಳೆಯಿತು.

ಎರಡನೆಯ ಮಹಾಯುದ್ಧದ ನಂತರ ಸೃಷ್ಟಿಯಾದ ಬಿಕ್ಕಟ್ಟನ್ನು ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆಯು *ವಿದೇಶಿ ನೆರವು, ಮಿಲಿಟರಿ ನೆರವು, ಶೀತಲಸಮರ* ಮುಂತಾದವುಗಳ ಮೂಲಕ ಪರಿಹರಿಸಿಕೊಂಡಿತು. ವಿದೇಶಿ ನೆರವು ಕಾರ್ಯಕ್ರಮವಂತೂ ೭೦-೮೦ರ ದಶಕದಲ್ಲಿ ಪೂರ್ತಿ ಮಿಲಿಟರಿ ನೆರವು ಸ್ವರೂಪ ತಳೆಯಿತು. ಪಾಶ್ಚಿಮಾತ್ಯ ದೇಶಗಳು ಸಾವಿರಾರು ಮಿಲಿಯನ್ ಡಾಲರ್ ಬಂಡವಾಳವನ್ನು ಅಸ್ತ್ರ- ಶಸ್ತ್ರಗಳ ಉತ್ಪಾದನೆ ಮೇಲೆ ತೊಡಗಿಸಿದವು. ವಿಶ್ವದ ನಾನಾ ಭಾಗದಲ್ಲಿದ್ದ ವಿಷಯತೆಯನ್ನು ದುರುಪಯೋಗಿಸಿಕೊಂಡು ಬಂಡವಾಳಶಾಹಿ ಬದುಕಿತು.

ಈಗ ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆಯು *ಗ್ಲೋಬಲೈಸೇಶನ್* ಮುಕ್ತ ಮಾರುಕಟ್ಟೆ ನೀತಿ, ಖಾಸಗೀಕರಣ, ಸರಕು ಸಂಸ್ಕೃತಿ ಪ್ರಚಾರ, ಡಂಕಲ್ ವ್ಯಾಪಾರಿ ಸೂತ್ರ ಮುಂತಾದವುಗಳ ಬಗ್ಗೆ ಮಾತಾಡುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮಾಜವಾದಿ ವ್ಯವಸ್ಥೆ ಪೂರ್ತಿ ಕುಸಿಯಿತು. ಇವೆಲ್ಲಾ ಬೆಳವಣಿಗೆಯಿಂದ ಪ್ರಭಾವಿತಗೊಂಡ ಅಭಿವೃದ್ಧಿಶೀಲದೇಶಗಳು ಸಮಾಜವಾದಿ ನೀತಿಗಳಿಗೆ ತರ್ಪಣ ಎರೆಯಲು ಪ್ರಾರಂಭಿಸಿವೆ.

ವಿಶ್ವಬ್ಯಾಂಕು ಹಾಗೂ ಅಂತರರಾಷ್ಟ್ರೀಯ ಹಣನಿಧಿ ಪ್ರಣೀತ ಆರ್ಥಿಕ ಕಾರ್ಯಕ್ರಮದಡಿಯಲ್ಲಿ ಈ ದೇಶಗಳು *ಸಾಮಾಜಿಕ ನ್ಯಾಯದ* ಉದ್ದೇಶಕ್ಕೆ ತಿಲಾಂಜಲಿ ನೀಡಲು ಸಿದ್ಧವಾಗಿರುವಂತೆ ಕಾಣುತ್ತಿದೆ. ಸಾರ್ವಜನಿಕ ವಲಯ ಇಂದು ತಬ್ಬಲಿಯಾಗುತ್ತಿದೆ. ಸಾರ್ವಜನಿಕ ವಲಯದ ಬಗ್ಗೆ ಮಾತನಾಡುವುದು *ಅಪರಾಧ* ಎಂಬ ವಾತಾವರಣ ಇಂದು ನಿರ್ಮಾಣಗೊಂಡಿದೆ. ಅಭಿವೃದ್ಧಿಶೀಲ ಆರ್ಥಿಕತೆಗಳ ವೈಫಲ್ಯದ ಕಾರಣಗಳನ್ನು ಸಾರ್ವಜನಿಕ ವಲಯದ ತಲೆಗೆ ಕಟ್ಟಲಾಗುತ್ತಿದೆ. ಖಾಸಗಿವಲಯವನ್ನು ಸುದ್ಗುಣಗಳ ಪ್ರತೀಕವೆಂಬಂತೆ ವರ್ಣಿಸಲಾಗುತ್ತಿದೆ. ಶಿಕ್ಷಣ, ವೈದ್ಯಕೀಯವನ್ನು ಸೇರಿಸಿಕೊಂಡು ಸಮಾಜದ ಎಲ್ಲಾ ಕ್ಷೇತ್ರಗಳಿಗೂ ಖಾಸಗಿವಲಯಕ್ಕೆ ಮುಕ್ತ ಪ್ರವೇಶವಿರಬೇಕೆಂದು ವರ್ಣಿಸಲಾಗುತ್ತಿದೆ. ಲಾಭ, ದಕ್ಷತೆ, ಪೈಪೋಟಿ, ಸ್ವಾರ್ಥ, ಸ್ವಹಿತ, ತಂತ್ರಜ್ಞಾನ-ಮುಂತಾದವು ಅಭಿವೃದ್ಧಿಯ ಸಾಧನಗಳಾಗಿದ್ದಾವೆ.

ಖಾಸಗೀಕರಣವು ಗ್ಲೋಬಲೈಸೇಶನ್ ಹೆಸರಿನಲ್ಲಿ ಅಂತರರಾಷ್ಟ್ರೀಯವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು (MNC) ಮತ್ತು ಖಂಡಾಂತರ ಸಂಸ್ಥೆಗಳು (TNC) ಅಭಿವೃದ್ಧಿಶೀಲ ಆರ್ಥಿಕತೆಗಳ ಮೇಲೆ ಆಕ್ರಮಣ ನಡೆಸಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ರೂಪುಗೊಂಡಿರುವ *ನವೀನ ಆರ್ಥಿಕ ನೀತಿಯನ್ನು* ಅಳವಡಿಸಿಕೊಳ್ಳದ ದೇಶಗಳಿಗೆ ಅಮೆರಿಕಾ, ಇಂಗ್ಲೆಂಡು, ಜರ್ಮನಿಗಳು ವ್ಯಾಪಾರ ಸಂಬಂಧವನ್ನು ನಿಷೇಧಿಸುವ ಬೆದರಿಕೆ ಒಡ್ಡುತಿವೆ. ವಿಶ್ವಬ್ಯಾಂಕು ಹಾಗೂ ಹಣನಿಧಿಗಳು ಹಣಕಾಸು ನೆರವು ನೀಡಲು ಷರತ್ತುಗಳನ್ನು ವಿಧಿಸುತ್ತಿವೆ. ಮುಕ್ತ ಮಾರುಕಟ್ಟೆ-ಉದಾರವಾದ- ಖಾಸಗೀಕರಣಗಳಿಂದ ಕೂಡಿದ ಆರ್ಥಿಕ ಸುಧಾರಣೆಗಳನ್ನು ಅಳವಡಿಸಿಕೊಳ್ಳಲೇ ಬೇಕಾದ ಕಡ್ಡಾಯ ಪರಿಸ್ಥಿತಿಯು ನಿರ್ಮಾಣವಾಗಿದೆ. ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆಯು ಇಂದು ಎದುರಿಸುತ್ತಿರುವ ಚಿಕ್ಕಟ್ಟಿನಿಂದ ಪಾರಾಗಬೇಕಾದರೆ ಅಭಿವೃದ್ಧಿಶೀಲ ಆರ್ಥಿಕತೆಗಳು ನವೀನ ಆರ್ಥಿಕ ನೀತಿಯನ್ನು ಅಳವಡಿಸಿಕೊಳ್ಳುವಂತೆ ಮಾಡಬೇಕಾಗಿದೆ. ಖಾಸಗೀಕರಣ, ಉದಾರವಾದ, ಮುಕ್ತ ಮಾರುಕಟ್ಟೆ, ಡಂಕಲ್ ವ್ಯಾಪಾರಿಸೂತ್ರಗಳು, ವಿಶ್ವಬ್ಯಾಂಕು, ಹಣನಿಧಿ-ಹೀಗೆ ಎಲ್ಲವೂ ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆ ರಕ್ಷಣೆ - ಪೋಷಣೆಗಾಗಿ ಇವೆ. ೧೮-೧೯ನೇ ಶತಮಾನಗಳಲ್ಲಿ ನಮ್ಮಂತಹ ದೇಶಗಳನ್ನು ಕಾಡಿದ ವಸಾಹತುಶಾಹಿ-ಸಾಮ್ರಾಜ್ಯಶಾಹಿಯು ಇಂದು ಹೊಸ ಉಡುಪಿನಲ್ಲಿ ಪ್ರತ್ಯಕ್ಷವಾಗಿವೆ. ೫೦-೬೦ರ ದಶಕಗಳಲ್ಲಿ ಬಂಡವಾಳಶಾಹಿ ಪಾಶ್ಚಿಮಾತ್ಯ ದೇಶಗಳು ಪರೋಕ್ಷವಾಗಿ ಅಕ್ಷಿವೃದ್ಧಿಶೀಲ ಆರ್ಥಿಕತೆಗಳನ್ನು ನಿಯಂತ್ರಿಸುತ್ತಿದ್ದವು. ಆಲಿಪ್ತ ಚಳುವಳಿ, ರಷ್ಯಾದ ಆಶ್ರಯ, ನೆಹರು-ಟಿಟೊ-ನಾಜರ್‌ರಂತಹರ ನಾಯಕತ್ವದಿಂದಾಗಿ ಅಂದು ಸ್ವತಂತ್ರ-ಸ್ವಾವಲಂಬಿ ಆರ್ಥಿಕ ಕಾರ್ಯಕ್ರಮ ರೂಪಿಸಿಕೊಳ್ಳುವಂತಹ ಸ್ಥಿತಿ ಅಭಿವೃದ್ಧಿ ಶೀಲ ಆರ್ಥಿಕತೆಗೆ ಇತ್ತು. ಪಾಶ್ಚಿಮಾತ್ಯ ಸಾಮ್ರಾಜ್ಯ ಶಾಹಿ ಆಕ್ರಮಣವನ್ನು ೫೦-೬೦ರ ದಶಕಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಎದುರಿಸಲಾಗಿತ್ತು.

ಆದರೆ ಇಂದು ಅಭಿವೃದ್ಧಿಶೀಲ ಆರ್ಥಿಕತೆಗಳ ಆರ್ಥಿಕ ಕಾರ್ಯಕ್ರಮದ ನಿರ್ಮಾಣದಲ್ಲಿ ನವವಸಾಹತುಶಾಹಿ-ನವಸಾಮ್ರಾಜ್ಯಶಾಹಿ ನೇರವಾಗಿ ಭಾಗ ವಹಿಸುತ್ತಿದೆ. ತೃತೀಯ ವಿಶ್ವದ ನಾಯಕತ್ವವೂ ಇಂದು ದುರ್ಬಲವಾಗಿದೆ. ಭಾರತದ ಸಂದರ್ಭದಲ್ಲಿ ನವೀನ ಆರ್ಥಿಕ ನೀತಿಯನ್ನು ತೆರೆದ ಬಾಹುಗಳಿಂದ ತಬ್ಬಿಕೊಳ್ಳಲಾಗಿದೆ. ವಿದೇಶಿ ಖಾಸಗಿ ಬಂಡವಾಳವನ್ನು ಆಹ್ವಾನಿಸಲು ಪ್ರಧಾನ ಮಂತ್ರಿ-ಹಣಕಾಸು ಮಂತ್ರಿ-ವಾಣಿಜ್ಯ ಮಂತ್ರಿಗಳು ದೇಶ- ವಿದೇಶ ಪ್ರವಾಸ ಮಾಡುತ್ತಿದ್ದಾರೆ. ವೃತ್ತಿಯಿಂದ ಅರ್ಥಶಾಸ್ತ್ರಜ್ಞರಾದ ನಮ್ಮ ಅರ್ಥ ಮಂತ್ರಿಗಳಾದ ಡಾ. ಮನಮೋಹನಸಿಂಗ್‌ರವರೂ ಸಹ ಭಾರತದ ಇಂದಿನ ಬಿಕ್ಕಟ್ಟಿಗೆ ಬಿಡುಗಡೆಯನ್ನು ವಿದೇಶಿ ಖಾಸಗಿ ಬಂಡವಾಳ, ಖಾಸಗೀಕರಣ, MNC-TNC-ಗಳಲ್ಲಿ ಕಂಡುಕೊಂಡಿದ್ದಾರೆ.

ಇಂದು ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆ ತೀವ್ರವಾದ ಬಿಕ್ಕಟ್ಟು - ಮುಗ್ಗಟ್ಟುಗಳನ್ನು ಎದುರಿಸುತ್ತಿದೆ. ಲಾರ್ಡ್‌ಕೇನ್ಸ್ ಸರಿಯಾಗೆ ಗುರುತಿಸಿರುವಂತೆ *ಬೇಡಿಕೆಯ ಕೊರತೆಯ* ಸಮಸ್ಯೆಯು ಬಂಡವಾಳಶಾಹಿಯ ಮೂಲದಲ್ಲೇ ಇದೆ. ಉನ್ನತವಾದ ಹಾಗೂ ಪ್ರೌಢವಾದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿರುವುದರಿಂದ *ಮಾನವ ಶ್ರಮಕ್ಕೆ* ಅವಕಾಶವೇ ಇಲ್ಲದಂತಾಗಿದೆ. ಪಶ್ಚಿಮ ಯುರೋಪ್ ದೇಶಗಳಲ್ಲಿ ಇಂದು ಶೇ. ೧೦ರಷ್ಟು ನಿರುದ್ಯೋಗ ಪ್ರಮಾಣ ಇದೆ. ಬೃಹತ್ ಪ್ರಮಾಣದ ಉತ್ಪಾದನೆಗೆ ಈ ದೇಶಗಳ ಮಾರುಕಟ್ಟೆಯೂ ಸೀಮಿತವಾದುದಾಗಿದೆ. ಸೋವಿಯಟ್ ರಷ್ಯಾ ಒಕ್ಕೂಟದ ವಿಘಟನೆ ನಂತರ ಶಸ್ತ್ರಾಸ್ತ್ರಗಳ ಬೇಡಿಕೆಯೂ ಕುಗ್ಗಿದೆ. ಆದ್ದರಿಂದ ಪಾಶ್ಚಿಮಾತ್ಯ ಬಂಡವಾಳಶಾಹಿಗೆ ಮಾರುಕಟ್ಟೆಯ ಅವಶ್ಯಕತೆ ಇದೆ. ನವಸಾಮ್ರಾಜ್ಯಶಾಹಿಯು ಅದಕ್ಕೆ ಅನಿವಾರ್ಯವಾಗಿದೆ. ಆದ್ದರಿಂದಲೇ ಅದಕ್ಕೆ ಗ್ಲೋಬಲೈಸೇಶನ್ ಬೇಕಾಗುತ್ತದೆ. ಮುಕ್ತ ವ್ಯಾಪಾರ ಬೇಕಾಗುತ್ತದೆ. ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆಗೆ ಅನುಕೂಲವಾಗುವಂತೆ ಆರ್ಥರ್ ಡಂಕಲ್‌ರವರು *ಸುಂಕ-ವ್ಯಾಪಾರಕ್ಕೆ ಸಂಬಂಧಿಸಿದ ಸಾಮಾನ್ಯ ಒಪ್ಪಂದ* ಸಂಸ್ಥೆಗಾಗಿ ವ್ಯಾಪಾರಿ ಸೂತ್ರಗಳನ್ನು ರಚಿಸಿದ್ದಾರೆ.

ಮುಕ್ತ ವ್ಯಾಪಾರ ಹಾಗೂ ಮುಕ್ತ ಮಾರುಕಟ್ಟೆಗಳನ್ನು ಪ್ರತಿಪಾದಿಸುತ್ತಿರುವ ಪಾಶ್ಚಿಮಾತ್ಯ ಬಂಡವಾಳಶಾಹಿಯು ತನ್ನ ಆರ್ಥಿಕತೆಯ ರಕ್ಷಣೆಗೆ ಬಗ್ಗೆ ಮಾತ್ರ ತುಂಬಾ ಎಚ್ಚರದಿಂದಿದೆ. ಉದಾ. ಅಭಿವೃದ್ಧಿಶೀಲ ದೇಶಗಳಿಂದ ಹರಿದು ಬರುತ್ತಿದ್ದ ಜನರ ವಲಸೆ ಮೇಲೆ ಅಭಿವರ್ಧಿನತ ದೇಶಗಳು ಬಗಿಯಾದ ನಿರ್ಬಂಧ ಹೇರುತ್ತಿವೆ. ಆದರೆ ಮುಕ್ತ ಮಾರುಕಟ್ಟೆ ಪ್ರತಿಪಾದಿಸುವ ಆರ್ಥಿಕ ಸುಧಾರಣಾ ಕಾರ್ಯಕ್ರಮವು ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್, ವಿಮೆ, ಸಾರಿಗೆ ಮುಂತಾದ ಕ್ಷೇತ್ರಗಳನ್ನು ದಕ್ಷತೆಯಿಂದ ನಿರ್ವಹಿಸಲು ಮಾನವ ಸಂಪನ್ಮೂಲಗಳನ್ನು ಅಭಿವರ್ಧಿತ ದೇಶಗಳಿಂದ ಅಭಿವೃದ್ಧಿಶೀಲ ದೇಶಗಳಿಗೆ ಕರೆದು ತರುವುದನ್ನು ಪ್ರೋತ್ಸಾಹಿಸುತ್ತದೆ.

ಭಾಗ - ೨

ಅಭಿವೃದ್ಧಿ ಸಿದ್ಧಾಂತ - ಒಂದು ಮರು ಪರಿಶೀಲನೆ

"ತೆಕ್ಕೆಗೊಗ್ಗದ ಹಗಲುಗನಸಿನ ದಘೂತಿ ತೊಡೆ
ಸಿಕ್ಕದೇ ಸಿಕ್ಕದಂತಾಗಿ ತೂಬನು ತೆಗೆವ
ಸ್ಪಷ್ಟೇಂದ್ರಿಯದ ಸ್ವಯಂ ಚಾಲಕಕೆ ತಡೆ ಹಾಕು
ಅಲ್ಲದೇ ಗಾಳಿಯಲ್ಲಿ ಬೆತ್ತಲೆ ಸುಳಿವ
ಅಪ್ಸರೆಯರ ಅನಂಗ ಸಂಘಟ್ಟನೆಗೆ ವೃಥಾ
ಮುಷ್ಟಿ ಮೈಥುನದಹಂಕಾರ ಕೆರಳಿಸ ಬೇಡ
ಕಳುಹಿಸಯ್ಯಾ ಬಳಿಗೆ ಕೃಪೆ ತಳೆದು ಆಗಾಗ್ಗೆ
ವಾಸ್ತವದ ಹೆಣ್ಣುಗಳ ನಿಜದ ತೊಡೆಗಳ
ಆತ್ಮ ಹೊಕ್ಕು ತಿಕ್ಕಲು ತಕ್ಕ
ಸುಕ್ಕಿರದ ಹೊಸ ತೊಗಲುಗಳ"

"ಚಿಪ್ಪೊಡೆದು ಬರಲಿ
ಪರಿಪೂರ್ಣವತಾರಿ
ವಿನತಾಪುತ್ರ
ಗಾಳಿ ಕಡೆಯಲು ಸೆಟೆದ ಬೆಳ್ಳಿಮಂತು" - ಅಡಿಗ (ಪ್ರಾರ್ಥನೆ)

ಹೀಗೆ ಅರ್ಥಶಾಸ್ತ್ರದ ಹಾಗೂ ಪಾಶ್ಚಿಮಾತ್ಯ ಬಂಡವಾಳಶಾಹಿಯ ವಿಕಾಸದ ಜೊತೆಜೊತೆಗೆ ರೂಪುಗೊಂಡ ವಿವಿಧ ವರಸೆಯ ಅಭಿವೃದ್ಧಿ ಸಿದ್ಧಾಂತಗಳು ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಗಳ ಚಲನಶೀಲತೆಯನ್ನಾಗಲಿ, ಅದರ ನಾಡಿಮಿಡಿತವನ್ನಾಗಲಿ ಗುರುತಿಸುವುದರಲ್ಲಿ ವಿಫಲವಾಗಿದ್ದಾವೆ. ಎಲ್ಲಾ ವರಸೆಯ ಅಂದರೆ ಅಭಿಜಾತ, ನವಅಭಿಜಾತ, ಲಾರ್ಡ್‌ಕೇನ್ಸ್ ಹಾಗೂ ಪ್ರಸ್ತುತ ವಿಶ್ವಬ್ಯಾಂಕು ಹಾಗೂ ಹಣನಿಧಿ (ಐ.ಎಂ.ಎಫ್) ಪ್ರಣೀತ ಸಿದ್ಧಾಂತಗಳು - ಸೂತ್ರ - ಸಮೀಕರಣಗಳು ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಾ ದೇಶದಳಲ್ಲಿನ ಅಭಿವೃದ್ಧಿ ಅನಾಟಮಿಯನ್ನು ಚಿಕಿತ್ಸೆಗೆ ಒಳಪಡಿಸುವಲ್ಲಿ ಸೋತಿವೆ. ಅಭಿವೃದ್ಧಿ ಸಿದ್ಧಾಂತಗಳೆಲ್ಲಾ ಒಂದಲ್ಲ ಒಂದು ವಿಧದಲ್ಲಿ ಬಂಡವಾಳಶಾಹಿಯ ಚಹರೆಯನ್ನು ಒಳಗೊಂಡಿದ್ದಾವೆ.

ಅಭಿವೃದ್ಧಿಶೀಲ ಆರ್ಥಿಕತೆಗಳ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸಹಾಯಕವಾಗುವ ಚಾರಿತ್ರಿಕ ಉದಾಹರಣೆಗಳಾಗಲಿ ಅಥವಾ ತಾತ್ವಿಕ ಸಿದ್ಧಾಂತಗಳಾಗಲಿ ನಮ್ಮೆದುರಿಗೆ ಇಲ್ಲ.

ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಸಿದ್ಧಾಂತಗಳೆಲ್ಲಾ ಅರ್ಥಶಾಸ್ತ್ರದ ಪ್ರಾಬಲ್ಯದಿಂದ ನರಳುತ್ತಿದ್ದಾವೆ. ಮೂಲದಲ್ಲಿ ಅಭಿವೃದ್ಧಿಶಾಸ್ತ್ರವು ಅರ್ಥಶಾಸ್ತ್ರದ ಒಂದು ಶಾಖೆಯಂತೆ ಒಡಮೂಡಿದ್ದು ನಿಜ. ಆದರೆ ಇಂದು ಅದು ಹಾಗೆ ಉಪಶಾಖೆಯಾಗಿ ಉಳಿದಿಲ್ಲ.

ಅರ್ಥಶಾಸ್ತ್ರದ ಸೀಮಿತ ಚೌಕಟ್ಟಿನಲ್ಲಿ ಸೃಷ್ಟಿಯಾಗಿರುವ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಮನುಷ್ಯನೇ ಇಲ್ಲವಾಗಿದ್ದಾನೆ. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿರುವ *ಧಾರ್ಮಿಕ* ಮನುಷ್ಯನಂತೆ ಅರ್ಥಶಾಸ್ತ್ರ-ಅಭಿವೃದ್ಧಿ ಸಿದ್ಧಾಂತಗಳು *ಆರ್ಥಿಕ* ಮನುಷ್ಯನ ಬಗ್ಗೆ ಮಾತಾಡುತ್ತವೆ. ಮನುಷ್ಯನ ವರ್ತನೆ, ಆಸೆ-ಆಕಾಂಕ್ಷೆ, ನೋವು-ನಲಿವುಗಳು, ಹಿತಾಸಕ್ತಿಗಳೆಲ್ಲವನ್ನೂ ಸಮೀಕರಣ-ಬಿಂಬಕಗಳ ಮೂಲಕ ಹಿಡಿದಿಡಬಹುದು ಎಂದು ಅರ್ಥಶಾಸ್ತ್ರ ನಂಬಿದಂತೆ ಕಾಣುತ್ತದೆ. ಕಾಲ-ದೇಶಗಳಿಗೆ ಅತೀತವಾದ ಸೂತ್ರ-ಸಿದ್ಧಾಂತಗಳನ್ನು ಮನುಷ್ಯನನ್ನು ಕುರಿತಂತೆ ರೂಪಿಸಬಹುದು ಎಂಬ ನಂಬಿಕೆ ಅರ್ಥಶಾಸ್ತ್ರದ ಮೂಲದಲ್ಲಿದೆ.

ಅರ್ಥಶಾಸ್ತ್ರದಂತೆ ಅಭಿವೃದ್ಧಿ ಶಾಸ್ತ್ರವನ್ನು ಸಹ ಬೆಳೆಸಿ ಪೋಷಿಸಿ ರಕ್ಷಿಸುತ್ತಿರುವವರು ಪಾಶ್ಚಿಮಾತ್ಯ ವಿದ್ವಾಂಸರು. ಅಭಿವೃದ್ಧಿ ಶೀಲ ಆರ್ಥಿಕತೆಗಳ ಅಭಿವೃದ್ಧಿ ಕಾರ್ಯಕ್ರಮ ಯೋಜನೆಗಳ ರಚನೆಯಲ್ಲಿ ಪಾಶ್ಚಿಮಾತ್ಯ ವಿದ್ವಾಂಸರು ಮಹತ್ವದ ಪಾತ್ರ ನಿರ್ವಹಿಸುತ್ತಿದ್ದಾರೆ. ಭಾರತವು ವಸಾಹತುವಾಗಿದ್ದಾಗ ಬ್ರಿಟನ್ನಿನ ಸಾಮ್ರಾಜ್ಯಶಾಹಿ ಆರ್ಥಿಕ ನೀತಿಯ ರಚನೆಯಲ್ಲಿ ನವಅಭಿಜಾತ ಅರ್ಥಶಾಸ್ತ್ರಜ್ಞರು ನಿರತರಾಗಿದ್ದರು. ಅದೇ ಗುಂಪಿನ ಅರ್ಥಶಾಸ್ತ್ರಜ್ಞರು ಹಾಗೂ ಆರ್ಥಿಕ ಸಿದ್ಧಾಂತಗಳು ಸ್ವಾತಂತ್ರ್ಯಾ ನಂತರ ಭಾರತದ ಅಭಿವೃದ್ಧಿ ಕಾರ್ಯಕ್ರಮ ಯೋಜನೆಗಳ ನಿರ್ಮಾಣದಲ್ಲೂ ಸಕ್ರಿಯರಾಗಿದ್ದಾರೆ. ಮೂರನೇ ಜಗತ್ತಿನ ಅಭಿವೃದ್ಧಿ ಶಾಸ್ತ್ರ ಕುರಿತ ವಿದ್ವಾಂಸರ ಮಹತ್ವ ಪೂರ್ಣ ಕಾಣಿಕೆಯನ್ನು ನಾವು ಕಡೆಗಣಿಸಿಬೇಕಾಗಿಲ್ಲ. ಆದರೆ ಸತ್ಯ ಏನೆಂದರೆ ಈ ಮೂರನೇ ಜಗತ್ತಿನ ಅಭಿವೃದ್ಧಿ ಕುರಿತ ವಿದ್ವಾಂಸರ ವಿಚಾರ - ಸಿದ್ಧಾಂತಗಳು ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತ - ವಿಚಾರಗಳ ಪಡಿನೆರಳಿನಂತೆ ಕಂಡು ಬಂದರೆ ಆಶ್ಚರ್ಯವಿಲ್ಲ.

ಇಂದು ಅಭಿವೃದ್ಧಿ ಕುರಿತಂತೆ ತೀವ್ರ ಚರ್ಚೆಗೆ ಸಂವಾದಕ್ಕೆ ತುತ್ತಾಗಿರುವ ಪ್ರಶ್ನೆಯೆಂದರೆ ಅಭಿವೃದ್ಧಿ ಶೀಲ ಆರ್ಥಿಕತೆಗಳ ಸಮಸ್ಯೆಗಳನ್ನು ಅಧ್ಯಯನ ಮಾಡಲು ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತಗಳು ಎಷ್ಟರಮಟ್ಟಿಗೆ ಸಹಾಯಕವಾಗಿವೆ? ಅಭಿವೃದ್ಧಿ ಶಾಸ್ತ್ರ ರೂಢಿಸಿಕೊಂಡಿರುವ ಸಾಧನ-ವಿಧಾನಗಳು ಬಡದೇಶಗಳ ವಿಶಿಷ್ಟ ಸಮಸ್ಯೆಗಳನ್ನು ಪೃಥಕ್ಕರಿಸಲು ಸಮರ್ಥವಾಗಿದ್ದಾವೆಯೆ?

ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಶಾಸ್ತ್ರದ ಬಗ್ಗೆ ಇಂದು ಅಭಿವೃದ್ಧಿ ಶೀಲ ದೇಶಗಳಲ್ಲಿ ಅನುಮಾನ-ಅಸಮಾಧಾನ ತೀವ್ರವಾಗಿ ಬೆಳೆಯುತ್ತಿದೆ. ಈ ಸಿದ್ಧಾಂತಗಳು ತೀವ್ರವಾದ ಟೀಕೆ- ಟಿಪ್ಪಣಿಗಳಿಗೆ ಒಳಗಾಗಿವೆ. ಅಭಿವೃದ್ಧಿ ಶೀಲ ಆರ್ಥಿಕತೆಗಳು ದೊಡ್ಡದನಿಯಲ್ಲಿ ಅಭಿವೃದ್ಧಿ ಶಾಸ್ತ್ರದ ಸಾಮರ್ಥ್ಯ ಹಾಗೂ ಪ್ರಸ್ತುತತೆ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾವೆ. ಅಭಿವೃದ್ಧಿಶೀಲ ಆರ್ಥಿಕತೆಗಳ ಸಮಸ್ಯೆಗಳಿಗೆ ಅಭಿವೃದ್ಧಿ ಶಾಸ್ತ್ರ ಪ್ರತಿ ಸ್ಪಂಧಿಸುತ್ತಿಲ್ಲ ಎನ್ನಲಾಗಿದೆ. ಅಭಿವೃದ್ಧಿಶಾಸ್ತ್ರದ ಮರು ಪರಿಶೀಲನೆಯ ಅವಶ್ಯಕತೆ ಹಿಂದೆಂದುಗಿಂತ ಇಂದು ಹೆಚ್ಚಾಗಿದೆ. ಅಭಿವೃದ್ಧಿಶೀಲ ಆರ್ಥಿಕತೆಗಳ ಗತಿ ಶೀಲತೆಯನ್ನು ಹಿಡಿದಿಡಬಲ್ಲ ಅಭಿವೃದ್ಧಿ

ಶಾಸ್ತ್ರದ ಆವಿಷ್ಕಾರದ ಅವಶ್ಯಕತೆ ಇದೆ. ಅಭಿವೃದ್ಧಿ ಶೀಲ ಆರ್ಥಿಕತೆಗಳ ಅಭಿವೃದ್ಧಿಯ ಗತಿಶೀಲತೆಯನ್ನು, ಅದರ ಸಾವಯವ ರಚನೆಯನ್ನು ಹಾಗೂ ಅವುಗಳ ಸಾಮಾಜಿಕ - ಸಾಂಸ್ಕೃತಿಕ ವೈರುಧ್ಯ - ವಿಷಮತೆಗಳನ್ನು ಗುರುತಿಸುವುದರಲ್ಲಿ ಪಾಶ್ಚಿಮಾತ್ಯ ಬಂಡವಾಳ ಶಾಹಿ ಅಭಿವೃದ್ಧಿ ಸಿದ್ಧಾಂತಗಳು ಅಸಮರ್ಥವಾಗಿದ್ದಾವೆ.

ಪಾಶ್ಚಿಮಾತ್ಯ ಅಭಿವೃದ್ಧಿಶಾಸ್ತ್ರದ ಮೂಲ ಕಲ್ಪನೆಯೆಂದರೆ ಅಭಿವೃದ್ಧಿ ಒಂದು ವ್ಯವಸ್ಥೆಯ ಚಾರಿತ್ರಿಕ ಸಾಂಸ್ಕೃತಿಕ ನೆಲೆಗಳಿಗೆ ಅತೀತವಾಗಿರುತ್ತದೆ ಎಂಬುದಾಗಿದೆ. ಅಭಿವೃದ್ಧಿ ಮಾದರಿ ಯೋಜನೆಗಳು ಸಾರ್ವತ್ರಿಕ-ಸಾರ್ವಕಾಲಿಕ ಎಂದು ನಂಬಲಾಗಿದೆ. ಪಾಶ್ಚಿಮಾತ್ಯ ದೇಶಗಳ ಅಭಿವೃದ್ಧಿಯ ಚಾರಿತ್ರಿಕ ಅನುಭವಗಳ ನೆಲೆಯಲ್ಲಿ ರೂಪುಗೊಂಡಿರುವ ಅಭಿವೃದ್ಧಿಶಾಸ್ತ್ರದ ಸಾಧನ ವಿಧಾನಗಳನ್ನೇ ಇಂದು ಅಭಿವೃದ್ಧಿ ಶೀಲ ಆರ್ಥಿಕತೆಗಳ ಅಧ್ಯಯನಕ್ಕೆ ಬಳಸಲಾಗುತ್ತಿದೆ. ಎಲ್ಲ ಕಾಲ-ದೇಶಗಳಿಗೂ ಇವು ಅನ್ವಯವಾಗಬಲ್ಲವು ಎಂದು ನಂಬಲಾಗಿದೆ. ಅಭಿವರ್ಧಿತ ಆರ್ಥಿಕತೆಗಳು ಸಾಗಿ ಬಂದ ದಾರಿಯಲ್ಲೇ ಅಭಿವೃದ್ಧಿ ಶೀಲ ಆಥಿಕತೆಗಳೂ ಸಹ ಸಾಗುತ್ತವೆ ಎಂಬ ತಪ್ಪು ಗ್ರಹಿಕೆ ಅಭಿವೃದ್ಧಿ ಶಾಸ್ತ್ರದ ಮೂಲದಲ್ಲಿದೆ. ಅಭಿವೃದ್ಧಿಯ ಗತಿ-ಸ್ವರೂಪ ಹಾಗೂ ವಾಪ್ತಿ ಒಂದು ವ್ಯವಸ್ಥೆಯ ಚರಿತ್ರೆ, ಸಂಸ್ಕೃತಿ-ಸಂಪ್ರದಾಯಗಳಿಂದ ಹೆಚ್ಚು ಪ್ರಭಾವಿತಗೊಳ್ಳುತ್ತವೆ. ಅಭಿವೃದ್ಧಿಶೀಲ ಆರ್ಥಿಕತೆಗಳಲ್ಲಿ ಇಂದು ನಡೆಯುತ್ತಿರುವ ಬದಲಾವಣೆಯ ಗತಿ-ಸ್ವರೂಪವನ್ನು ಅಭಿವೃದ್ಧಿಶಾಸ್ತ್ರ ಹಿಡಿದಿಡುವ ಸ್ಥಿತಿಯಲಿಲ್ಲ.

ಪಾಶ್ಚಿಮಾತ್ಯ ಸಮಾಜಗಳಲ್ಲಿ ಅಭಿವೃದ್ಧಿಯನ್ನು ಒಂದು ಸ್ವತಂತ್ರ ಪ್ರತ್ಯೇಕ ಘಟಕ ಕ್ರಿಯೆಯಾಗಿ ಅಧ್ಯಯನ ಮಾಡಬಹುದು. ಆದರೆ ಇಂತಹ ಪ್ರತ್ಯೇಕ ಅಧ್ಯಯನವು ಅಭಿವೃದ್ಧಿ ಶೀಲ ಆರ್ಥಿಕತೆಗಳಲ್ಲಿ ಸಾಧ್ಯವಿಲ್ಲ. ಉದಾ. ಭಾರತದಲ್ಲಿನ ಬಡತನದ ಸಮಸ್ಯೆಯನ್ನು ಅಲ್ಲಿನ ವ್ಯವಸ್ಥೆಯ ಜಾತಿ ಸ್ವರೂಪದಿಂದ ಬೇರ್ಪಡಿಸಿ ಅಧ್ಯಯನ ಮಾಡುವುದು ಸಾಧ್ಯವಿಲ್ಲ. ಅರ್ಥಶಾಸ್ತ್ರದ ಗಡಿಯನ್ನು ಮೀರಿದ ವಿಶಾಲ ಬಿತ್ತಿಯಲ್ಲಿ ಇದನ್ನು ಪರಿಶೀಲಿಸಬೇಕಾಗುತ್ತದೆ.

ಅಭಿವೃದ್ಧಿಶೀಲ ಆರ್ಥಿಕತೆಗಳಲ್ಲಿ ೭೦ರ ದಶಕದ ನಂತರ ಬಡತನ ನಿವಾರಣೆ ಬಗ್ಗೆ ಹೆಚ್ಚು ಚಿಂತನೆ - ಕಾರ್ಯ ಪ್ರಾರಂಭವಾಯಿತು. ಬಡತನ ಕುರಿತಂತೆ ಹಲವಾರು ಅಧ್ಯಯನ - ಸಂಶೋಧನೆಗಳು ನಡೆದವು. ಬಡತನದ ಪರಿಮಾಣದ ಅಂದಾಜು, ಬಡತನದ ಗುಣ ಲಕ್ಷಣಗಳು, ಬಡತನದ ವಾಖ್ಯೆ- ಮುಂತಾದ ವಿಷಯ ಕುರಿತಂತೆ ಭಾರತದ ಹಲವಾರು ಅರ್ಥಶಾಸ್ತ್ರಜ್ಞರು ಮಹತ್ವದ ಕೆಲಸ ಮಾಡಿದ್ದಾರೆ. ಇವೆಲ್ಲವೂ ಸರಿ. ಆದರೆ ಈ ಅಧ್ಯಯನ ಸಂಶೋಧನೆಗಳಲ್ಲಿ ಹಾಗೂ ಅವುಗಳ ಆಧಾರದ ಮೇಲೆ ರೂಪುಗೊಂಡ ಕಾರ್ಯಕ್ರಮ ಗಳಲ್ಲಿ ಅಮೂರ್ತವಾದ *ಬಡತನ* ಹೆಚ್ಚಿನ ಮಹತ್ವ ಪಡೆಯಿತೆ ಹೊರತು ಬಡವನಲ್ಲ. ಬಡವನ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ನೆಲೆಯನ್ನು ಪರಿಗಣಿಸದೆ ಅಮೂರ್ತ ಪರಿಕಲ್ಪನೆ

ಯಾದ ಬಡತನವನ್ನು ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತಗಳ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಪ್ರಯತ್ನ ನಡೆದಿದೆ.

ವಾಸ್ತವಿಕವಾಗಿ ಭಾರತದಂತಹ ಶ್ರೇಣೀಕೃತ ಹಾಗೂ ಅಸಮ ವ್ಯವಸ್ಥೆಯಲ್ಲಿ *ಬಡತನ*ಕ್ಕಿಂತ *ಬಡವ* ಅಧ್ಯಯನದ ಹಾಗೂ ಕಾರ್ಯಕ್ರಮದ ಕೇಂದ್ರವಾಗುವ ಅವಶ್ಯಕತೆ ಇದೆ. ಬಡತನವನ್ನು ನಾವು ಸಾಮಾನ್ಯವಾಗಿ ಆರ್ಥಿಕ ವರಮಾನದ ನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸುತ್ತಿದ್ದೇವೆ. ಇಂತಹ ಗ್ರಹಿಕೆ ಪಾಶ್ಚಿಮಾತ್ಯ ವ್ಯವಸ್ಥೆಯಲ್ಲಿ ಸರಿಯೆನಿಸಬಹುದು. ಆದರೆ ಭಾರತದಂತಹ ವ್ಯವಸ್ಥೆಯಲ್ಲಿ ಆರ್ಥಿಕ ಬಡತನಕ್ಕಿಂತ ಸಾಮಾಜಿಕ ಸಾಂಸ್ಕೃತಿಕ ವಿಷಮತೆಯಲ್ಲಿ ಸಿಲುಕಿಕೊಂಡಿರುವ *ಬಡವ* ಮುಖ್ಯವಾಗಬೇಕು. ಬಡವನೊಬ್ಬ ಯಾಕೆ ಬಡವನಾಗಿದ್ದಾನೆ ಎಂಬುದಕ್ಕೆ ಕಾರಣಗಳು ಕೇವಲ ಆರ್ಥಿಕವಾಗಿರುವುದಿಲ್ಲ. ಬಡತನವನ್ನು ಕೇವಲ *ಆರ್ಥಿಕ* ನೆಲೆಗೆ ಸೀಮಿತಗೊಳಿಸಿ ಬಿಟ್ಟರೆ ಅದರ ಸಾಂಸ್ಕೃತಿಕ ಹಾಗೂ ಸಾಮಾಜಿಕ ನೆಲೆಗಳು ಮೂಲೆ ಗುಂಪಾಗಿ ಬಿಡುತ್ತವೆ. ಸಾಮಾಜಿಕ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುವ ಮತ್ತು ಅದೊಂದು *ವಿಧಿ ಲಿಖಿತ ಶಾಪ* ಎಂಬ ನಂಬಿಕೆ ಆಳವಾಗಿ ಬೇರೂರಿರುವ ಭಾರತದಂತಹ ಸಮಾಜದಲ್ಲಿ ಬಡತನದ ಅಧ್ಯಯನವು, ಅದರ ನಿವಾರಣೆ ಕಾರ್ಯಕ್ರಮಗಳು ಆರ್ಥಿಕ ಅಂಶಗಳ ಮೇರೆಯನ್ನು ಮೀರಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ನಡೆಯಬೇಕಾದ ಅವಶ್ಯಕತೆ ಇದೆ. ಬಡತನವೆಂಬುದು *ಪೂರ್ವ ಜನ್ಮದ ಪಾಪದ ಫಲ* ಎಂಬ ಹತಾಶ ವಿಧಿವಿಲಾಸದ ನಂಬಿಕೆಯ ಮೇಲೆ ನಿಂತಿರುವುದರಿಂದ ಅದರ ನಿವಾರಣೆಯು ನಮ್ಮಲ್ಲಿ ಪುಣ್ಯದ ಕಾರ್ಯವಾಗಿದೆ. ಅದೊಂದು ಧರ್ಮ ಕಾರ್ಯವಾಗಿದೆ.

ಪುಣ್ಯ-ಧರ್ಮ ಕಾರ್ಯಗಳಿಂದ ಬಡತನವನ್ನು ನಿವಾರಿಸುವುದು ಸಾಧ್ಯವಿಲ್ಲ. ಬಡವನನ್ನು ಕೇಂದ್ರವಾಗಿರಿಸಿಕೊಂಡು ಬಡವನನ್ನು ತೊಡಗಿಸಿಕೊಂಡ *ಚಳುವಳಿ* ರೂಪದ ಕಾರ್ಯಕ್ರಮ ಈ ದಿಶೆಯಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗುವ ಸಾಧ್ಯತೆ ಇದೆ. ಬಡತನಕ್ಕಿಂತ *ಬಡವ* ಮುಖ್ಯವಾದಾಗ ಕೆಲವು ಸಮಸ್ಯೆಗಳು ಎದುರಾಗುತ್ತವೆ. ಬಡವ ಮುಖ್ಯವಾದಾಗ ಅಲ್ಲಿ ನಾವು ಸಾಮಾಜಿಕ, ಆರ್ಥಿಕ, ರಾಜಕೀಯ ಹಿತಾಸಕ್ತಿಗಳನ್ನು ಎದುರಿಸಬೇಕಾಗುತ್ತದೆ. ಬಡತ್ತನ ಮುಖ್ಯವಾದಾಗ ಅದೊಂದು ಶುಷ್ಕ ಆರ್ಥಿಕ ಸಮಸ್ಯೆಯಾಗಿ ಮಾತ್ರ ಕಾಣುತ್ತದೆ. ಬಡತನ ಮುಖ್ಯವಾದಾಗ ಅಲ್ಲಿ ಆರ್ಥಿಕ ಅವಶ್ಯಕತೆಗಳನ್ನು ಒದಗಿಸುವ ಕಡೆ ಗಮನಹರಿಯುತ್ತದೆ. ಬಡವನ ಸ್ಥಿತಿ ಗತಿ ಸ್ಥಾನ ಮಾನಗಳು ಕೇವಲ ಅವನ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವುದರಿಂದ ಉತ್ತಮಗೊಳ್ಳಲು ಸಾಧ್ಯವಿಲ್ಲ.

ಭಾರತದ ಗ್ರಾಮೀಣದಲ್ಲಿ ಬಡವ ಹಲವಾರು ಅಸಾಮರ್ಥ್ಯಗಳಿಂದ ನರಳುತ್ತಿದ್ದಾನೆ. ಅಸಮ ಹಾಗೂ ಶ್ರೇಣೀಕೃತ ಸಾಮಾಜಿಕ- ಸಾಂಸ್ಕೃತಿಕ ಅಮಾನವೀಯ ವಿಷಚಕ್ರದಲ್ಲಿ ಬಡವ ಬಂದಿಯಾಗಿದ್ದಾನೆ. ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ಅಸಾಮರ್ಥ್ಯದಿಂದಾಗಿ

ಬಡವನಿಗೆ ಅಭಿವೃದ್ಧಿಯ ಫಲ ದೊರೆಯುತ್ತಿಲ್ಲ. ಬಡವರಿಗಾಗೆ ಮೀಸಲಾದ ಕಾರ್ಯಕ್ರಮಗಳೂ ಸಹ ಅಭಿವೃದ್ಧಿ ಫಲಗಳನ್ನು ಬಡವನಿಗೆ ತಪುಪಿಸಲಾಗುತ್ತಿಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ ಅಭಿವೃದ್ಧಿಯ ಫಲಗಳನ್ನು ಪಡೆಯಬೇಕೆಂಬ ಅಧಮ್ಯ ಅಭೀಪ್ಸೆಯು ಬಡವನಲ್ಲಿ ಮೂಡುತ್ತಿಲ್ಲ. ಬಡವ ಎಲ್ಲಿ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಜಾಗೃತನಾಗಿರುತ್ತಾನೊ ಅಲ್ಲಿ ಮಾತ್ರ ಅಭಿವೃದ್ಧಿ ಫಲ ಅವನಿಗೆ ದೊರೆಯುವ ಸಾಧ್ಯತೆ ಇದೆ. ಆದ್ದರಿಂದ ಅಭಿವೃದ್ಧಿ ಕಾರ್ಯದಲ್ಲಿ ಬಡವ ತೊಡಗುವಂತೆ ಮಾಡುವ ಅವಶ್ಯಕತೆ ಇದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಲು ಬಡವನಿಗೆ ಇರುವ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಅಸಾಮರ್ಥ್ಯಗಳನ್ನು ಗುರುತಿಸಬೇಕಾಗಿದೆ.

ಬಡತನದ ನಿವಾರಣೆ, ಅಂದರೆ ಅಭಿವೃದ್ಧಿ ಎಂಬುದು ಧರ್ಮದ ಕೆಲಸವಾದಾಗ ಚಾರಿಟಿಯಾದಾಗ ಅದು ಯಶಸ್ವಿಯಾಗುವುಗು ಸಾಧ್ಯವಿಲ್ಲ. ಬಡವನನ್ನು ತೊಡಗಿಸಿಕೊಂಡ ಚಳುವಳಿಯಾದಾಗ ಅಭಿವೃದ್ಧಿ ಸಫಲವಾದೀತು. ಬಡವರನ್ನು ತೊಡಗಿಸಿಕೊಂಡು ಚಳುವಳಿ ರೂಪದಲ್ಲಿ ಸ್ಥಳೀಯ ಮಟ್ಟದಲ್ಲಿ ನಡೆದ ಅಭಿವೃದ್ಧಿ ಪ್ರಯೋಗಗಳು ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಸ್ಥಾನ ಪಡೆಯಲಿಲ್ಲ. ಪಾಶ್ಚಿಮಾತ್ಯ ವಿದ್ವಾಂಸರ ಆಸಕ್ತಿ ಕೆರಳಿಸಲಿಲ್ಲ. ಇಂತಹ ಪ್ರಯೋಗಗಳ ಹಿನ್ನೆಲೆಯಲ್ಲಿ ಸಿದ್ಧಾಂತಗಳು ರೂಪುಗೊಳ್ಳಲಿಲ್ಲ. ಇಂತಹ ಪ್ರಯೋಗಗಳು ಭಾರತಕ್ಕೆ ಹೊಸದೇನಲ್ಲ. ಸ್ವಾತಂತ್ರ್ಯ-ಸಂಗ್ರಾಮದ ಸಂದಂರ್ಭದಲ್ಲಿ ಗಾಂಧಿ ಈ ಕೆಲಸ ಮಾಡಿದ್ದರು. ಬಡವ-ಬಲ್ಲಿದ, ಮೇಲು-ಕೀಳು ಎನ್ನದೆ ಇಡೀ ಜನಸ್ತೋಮ ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದಾಗ ಅದೊಂದು ರಾಜಕೀಯ ಶಕ್ತಿಯಾಯಿತು. ಅದೇ ರೀತಿ ಇಂದು ಬಡವರನ್ನು ತೊಡಗಿಸಿಕೊಂಡ ಬೃಹತ್ ಚಳುವಳಿಯೊಂದು ಬೇಕಾಗಿದೆ. ಆ ಮೂಲಕ ಬಡವರಿಗೆ ರಾಜಕೀಯ-ಸಾಂಸ್ಕೃತಿಕ ಸಾಮರ್ಥ್ಯವನ್ನು ಒದಗಿಸಬೇಕಾಗಿದೆ.

ಪ್ರಸಿದ್ಧ ಅರ್ಥಶಾಸ್ತ್ರಜ್ಞ ಅಮಾರ್ತಸೆನ್‌ರವರು ಸರ್ಕಾರ - ಸಾರ್ವಜನಿಕ ವಲಯ ಹಾಗೂ ಸಾರ್ವಜನಿಕ-ಇವುಗಳಿಗಿರುವ ಭಿನ್ನತೆಗಳನ್ನು ಗುರುತಿಸಿ *ಸಾರ್ವಜನಿಹದ* ಪಾತ್ರವನ್ನು ಮಹತ್ವದನ್ನಾಗಿಸಿದ್ದಾರೆ. ಅಭಿವೃದ್ಧಿಯ ಫಲ ಬಡವರಿಗೆ ದೊರೆಯಬೇಕಾದರೆ ಅಲ್ಲಿ ಒತ್ತಡ ನಿರ್ಮಾಣವಾಗಬೇಕು. *ಸಾರ್ವಜನಿಕ ಒತ್ತಡ*ವನ್ನು ಕುರಿತಂತೆ ಅವರು ಸಿದ್ಧಾಂತ ನಿರ್ಮಿಸಿದ್ದಾರೆ. ಬಡತನ - ಹಸಿವು ಮುಂತಾದ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲ. ಏಕೆಂದರೆ ಸಮಾಜದಲ್ಲಿ ಅವು ಇರುವಂಥಹವೆ ಎನ್ನುವ ಹತಾಶ ಪಲಾಯನವಾದಿ ದೃಷ್ಟಿಕೋನವನ್ನು ಅಮೂರ್ತಸೆನ್ ಒಪ್ಪುವುದಿಲ್ಲ. ಬಡತನ-ಹಸಿವುಗಳು ಪರಿಹರಿಸಲಾಗದ ಸಮಸ್ಯೆಗಳೇನಲ್ಲ.

ಸಾರ್ವಜನಿಕ ಒತ್ತಡ ಎಂದರೆ ಕೇವಲ ಸಾರ್ವಜನಿಕರ ಬೇಡಿಕೆಗಳನ್ನು ಸರ್ಕಾರ ಇಡೇರಿಸುವುದಷ್ಟೆ ಅಲ್ಲ. ಸಾರ್ವಜನಿಕರೇ ತೆಗೆದುಕೊಳ್ಳುವ ಕ್ರಮವನ್ನು ಅದು ಒಳ

ಗೊಳ್ಳುತ್ತದೆ. ಸರ್ಕಾರವು ಬಡತನದ ಬಗ್ಗೆ ಏನು ಮಾಡಬಹುದು ಎಂಬುದನ್ನು ಸಾರ್ವಜನಿಕರು ಮನವರಿಕೆ ಮಾಡಿಕೊಡಬೇಕು. ಬಡತನ ಹಸಿವುಗಳನ್ನು ನಿವಾರಿಸಲು ಸೂಕ್ತವಾದ ಕಾರ್ಯಕ್ರಮ ಶಾಸನಗಳನ್ನು ರೂಪಿಸುವಂತೆ ಒತ್ತಡತರಬೇಕು. *ಸಾರ್ವಜನಿಕ ಒತ್ತಡವು* ಸರಿಯಾಗಿ ರೂಪುಗೊಳ್ಳಬೇಕಾದರೆ ಪ್ರಜಾಪ್ರಭುತ್ವ ಸುದ್ದಿ ಮಾಧ್ಯಮಗಳು ಮುಕ್ತವಾಗಿರಬೇಕು ಸ್ವತಂತ್ರವಾಗಿರಬೇಕು. ರಾಜಕೀಯ ಕ್ಷೇತ್ರದಲ್ಲಿ ಬಡತನವು ಮುಖ್ಯವಾದ ಪ್ರಶ್ನೆಯಾಗಬೇಕು. ಆಗ ಮಾತ್ರ ಸರ್ಕಾರವು ಜನರ ಕಷ್ಟಗಳಿಗೆ ಓಗೊಡುವ, ಪ್ರತಿಸ್ಪಂಧಿಸುವ ಸಾಧ್ಯತೆ ಇದೆ. ಸಾರ್ವಜನಿಕ ಒತ್ತಡ ಕೇವಲ ಸರ್ಕಾರವೊಂದನ್ನೇ ಗುರಿ ಮಾಡಿಕೊಳ್ಳಬಾರದು ಮತ್ತು ಹೊಣೆ ಮಾಡಬಾರದು. ಸಮಾಜದ ಎಲ್ಲ ಕ್ಷೇತ್ರಗಳನ್ನು ಅಂದರೆ ವಾಣಿಜ್ಯ, ವ್ಯಾಪಾರ, ಸುದ್ಧಿ ಮಾಧ್ಯಮ, ರಾಜಕೀಯ ಪಕ್ಷಗಳು ಮುಂತಾದ ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳನ್ನು ಅದು ಒಳಗೊಳ್ಳಬೇಕು. ಸರ್ಕಾರ ಹಾಗೂ ಮಾರುಕಟ್ಟೆಗಳ ಸೂಕ್ತ ಸಂಯೋಜನೆಗೊಳಿಸಿದ ವ್ಯವಸ್ಥೆಯಲ್ಲಿ ಜನಪರವಾದ ಕಾರ್ಯಕ್ರಮಗಳು ಯಶಸ್ವಿಯಾಗಬಲ್ಲವು. ಉದಾರವಾದ-ಖಾಸಗೀಕರಣಗಳ ಹೆಸರಿನಲ್ಲಿ *ಸರ್ಕಾರ -ಸಾರ್ವಜನಿಕ ವಲಯಗಳ* ಪಾತ್ರವನ್ನು ಪೂರ್ತಿಕಡೆಗಣಿಸುವುದು ಸೂಕ್ತವಲ್ಲ. ಆಹಾರ, ಆರೋಗ್ಯ, ಶಿಕ್ಷಣ, ಸಾರ್ವಜನಿಕ ಸೌಲಭ್ಯಗಳ ಕ್ಷೇತ್ರದಲ್ಲಿ ಸಾರ್ವಜನಿಕವಲಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಸಿದ್ಧಾಂತಗಳು ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಲ್ಲಿ ಅತಿ ಮಹತ್ವದ ಸ್ಥಾನವನ್ನು ತಂತ್ರಜ್ಞಾನಕ್ಕೆ ನೀಡಿದ್ದಾವೆ. ಅಭಿವೃದ್ಧಿಯ ಹಿಂದಿನ ಪ್ರೇರಕ ಶಕ್ತಿಯಾಗಿ ತಂತ್ರಜ್ಞಾನವನ್ನು ಪರಿಗಣಿಸಲಾಗಿದೆ. ತಾಂತ್ರಿಕ ಆವಿಷ್ಕಾರಗಳು ಉತ್ಪಾದನೆಯಲ್ಲಿ ದಕ್ಷತೆಯನ್ನು ಉತ್ತಮ ಪಡಿಸುವ ಮಹತ್ವದ ಸಾಧನಗಳಾಗಿದ್ದಾವೆ. ಅಭಿವೃದ್ಧಿಶೀಲ ಆರ್ಥಿಕತೆಗಳ ಸಮಸ್ಯೆಗಳನ್ನು ಚರ್ಚಿಸುವಲ್ಲಿ ತಾಂತ್ರಿಕ ಜ್ಞಾನದ ಕೊರತೆಯನ್ನು ಬಹು ಮುಖ್ಯ ತೊಡಕು ಎಂದು ಪರಿಗಣಿಸಲಾಗಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿನ ಹಿಂದುಳಿದಿರುವಿಕೆಯೇ ಬಡತನ-ನಿರುದ್ಯೋಗ-ಹಸಿವು ಮತ್ತು ಅನಭಿವೃದ್ಧಿಸ್ಥಿತಿಗೆ ಕಾರಣವಾಗಿದೆ. ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಮೀಮಾಂಸೆಯು ಅಭಿವೃದ್ಧಿಯನ್ನು ತಾಂತ್ರಿಕಜ್ಞಾನ - ಆವಿಷ್ಕಾರಗಳ ಫಲವೆಂದು ಪರಿಗಣಿಸಿದೆ. ಆದರೆ ಅಭಿವೃದ್ಧಿಶೀಲ ಆರ್ಥಿಕತೆಗಳಲ್ಲಿನ ಉತ್ಪಾದನಾ ಕ್ಷೇತ್ರಗಳಲ್ಲಿ ಹಳೆಯ ಕಾಲದ ಹಾಗೂ ಅದಕ್ಷ ತಂತ್ರ ವಿಧಾನಗಳು ಇನ್ನೂ ಬಳಕೆಯಲ್ಲಿವೆ. ಉನ್ನತ ಹಾಗೂ ಪ್ರೌಢತಂತ್ರಜ್ಞಾನವನ್ನು ತೀವ್ರ ರೀತಿಯಲ್ಲಿ ಬಳಸಿಕೊಳ್ಳಲು ಅಭಿವೃದ್ಧಿಶೀಲ ಆರ್ಥಿಕತೆಗಳಿಗೆ ಹಲವಾರು ಸಮಸ್ಯೆಗಳಿವೆ.

ಅಭಿವೃದ್ಧಿಶೀಲ ಆರ್ಥಿಕತೆಗಳು ಲಾಗಾಯ್ತಿನಿಂದ ತಂತ್ರಜ್ಞಾನದ ಬಗ್ಗೆ ಉಪೇಕ್ಷೆಭಾವನೆ ತಳೆದಿದ್ದವು ಎನ್ನುವುದು ಪೂರ್ಣ ಸತ್ಯವಲ್ಲ. ಅಭಿವೃದ್ಧಿ ಮೀಮಾಂಸೆಯು ತಂತ್ರ

ಜ್ಞಾನವನ್ನು ಎಲ್ಲಾ ದೇಶ ಕಾಲಕ್ಕೂ ಅನ್ವಯವಾಗಬಲ್ಲ ಸಾಧನ ಎಂದು ನಂಬಿದೆ. ಆದರೆ ತಂತ್ರಜ್ಞಾನವೂ ಸಹ ಕಾಲ ದೇಶ ಬದ್ಧವಾದ ಒಂದು ಪರಿಕರವಾಗಿದೆ. ಅಭಿವೃದ್ಧಿಶೀಲ, ಆರ್ಥಿಕತೆಗಳಲ್ಲಿನ ಉತ್ಪಾದನಾ ಕ್ಷೇತ್ರದ ಎಲ್ಲಾ ಸಮಸ್ಯೆಗಳನ್ನು ತಂತ್ರಜ್ಞಾನದ ಮೂಲಕ ಪರಿಹರಿಸಬಹುದು ಎಂಬುದು ಸರಿಯಲ್ಲ. ಏಕೆಂದರೆ ಭಾರತದಂತಹ ವ್ಯವಸ್ಥೆಯಲ್ಲಿ ಅಭಿವೃದ್ಧಿಯನ್ನು ಸಂಪನ್ಮೂಲಗಳ ಮಾಲಿಕತ್ವ, ವಿವಿಧ ವರ್ಗಗಳಿಗಿರುವ ಅಧಿಕಾರ ಹಕ್ಕು, ಸಾಮಾಜಿಕ, ರಾಜಕೀಯ ಪರಿಸ್ಥಿತಿ ಮುಂತಾದವುಗಳಿಂದ ಬೇರ್ಪಡಿಸುವುದು ಸಾಧ್ಯವಿಲ್ಲ.

ಪಾಶ್ಚಿಮಾತ್ಯ ವ್ಯವಸ್ಥೆಯಲ್ಲಿ ರೂಪುಗೊಂಡ ಉನ್ನತ ತಂತ್ರಜ್ಞಾನವು ಅಭಿವೃದ್ಧಿಶೀಲ ಆರ್ಥಿಕತೆಗಳಿಗೆ ದುಬಾರಿ ಹಾಗೂ ಸೂಕ್ತವಾದುದಲ್ಲ ಎಂಬುದು ೬೦-೭೦ರ ದಶಕಗಳಲ್ಲಿ ಸೃಷ್ಟಿಯಾಯಿತು. ಈ ಹಿನ್ನೆಲೆಯಲ್ಲಿ *ಯುಕ್ತತಂತ್ರಜ್ಞಾನದ* ವಿಚಾರ ಮಧ್ಯವರ್ತಿ ತಂತ್ರ ಜ್ಞಾನದ ವಿಚಾರಗಳು ಪ್ರಚುರಕ್ಕೆ ಬಂದವು. ಭಾರತದಂತಹ ವ್ಯವಸ್ಥೆಯಲ್ಲೇ ಅನಾದಿಕಾಲ ದಿಂದ ಬಳಕೆಯಲ್ಲಿರುವ ತಂತ್ರಜ್ಞಾನವನ್ನು ಇಂದಿನಕಾಲಕ್ಕೆ ಸೂಕ್ತವಾಗುವಂತೆ ಪರಿವರ್ತಿಸಿಕೊಳ್ಳುವ ಪ್ರಯತ್ನಗಳೂ ನಡೆಯುತ್ತಿದ್ದಾವೆ. ಆಧುನಿಕ-ಉನ್ನತ ತಂತ್ರಜ್ಞಾನದ ಬಗ್ಗೆ ತೀವ್ರ ಅಸಮಧಾನ ವಿಶ್ವದ್ಯಾಂತ ಮೂಡುತ್ತಿದೆ. ಅದೊಂದು ದುಬಾರಿ ತಂತ್ರಜ್ಞಾನ, ಸಾಂದ್ರ ಬಂಡವಾಳ ಬಯಸುವಂತಹುದು. ಶ್ರಮಶಕ್ತಿಯನ್ನು ಪಲ್ಲಟಗೊಳಿಸು ವಂತಹುದು, ಬಡವ-ಬಲ್ಲಿದರ ನಡುವೆ ಅಸಮಾನತೆಯನ್ನು ಹಿಗ್ಗಿಸುವಂತಹುದು, ಜೈವಿಕ ಅಸಮತೋಲನ ಸೃಷ್ಟಿ ಮಾಡುವಂತಹದು ಹಾಗೂ ಉತ್ಪನ್ನದಿಂದ ದುಡಿಮೆಗಾರರನ್ನು ಅನ್ಯ ಮಾಡುವಂತಹದು.

ಇಷ್ಟೆಲ್ಲಾ ಅಪಾಯಗಳಿದ್ದರೂ ಸಹ ಆಧುನಿಕ - ಉನ್ನತ ತಂತ್ರಜ್ಞಾನ ತನ್ನ ಮಹತ್ವವನ್ನೇನು ಕಳೆದುಕೊಂಡಿಲ್ಲ. ಅಭಿವೃದ್ಧಿಶೀಲ ಆರ್ಥಿಕತೆಗಳು ಪಾಶ್ಚಿಮಾತ್ಯ ತಂತ್ರ ಜ್ಞಾನಕ್ಕೆ ಆತುಕೊಂಡಿದ್ದಾವೆ. ಖಾಸಗಿ ವಿದೇಶಿ ಬಂಡವಾಳದ ಪರವಾಗಿ ವಾದಿಸುವಾಗ ಅದು ತರಬಹುದಾದ ಉನ್ನತ ತಂತ್ರಜ್ಞಾನವನ್ನು ಒತ್ತಿ ಹೇಳಲಾಗುತ್ತಿದೆ.

ಭಾರತದಂತಹ ಸಮಾಜದಲ್ಲಿ ತಂತ್ರಜ್ಞಾನದ ಪಾತ್ರವನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗಿದೆ. ಇಂತಹ ವ್ಯವಸ್ಥೆಯಲ್ಲಿ ತಂತ್ರಜ್ಞಾನವು ಅಭಿವೃದ್ಧಿಯನ್ನು ಒಂದು ಮಟ್ಟದವರೆಗೆ ಮಾತ್ರ ಕೊಂಡೊಯ್ಯಬಲ್ಲದು. ಏಕೆಂದರೆ ನಮ್ಮ ಸಂದರ್ಭದಲ್ಲಿ ಸಮಸ್ಯೆಗಳು ಹೆಚ್ಚು ಹೆಚ್ಚು ಸಾಮಾಜಿಕ-ಸಾಂಸ್ಕೃತಿಕ-ಕುಲಸಂಬಂಧಿ ಸ್ವರೂಪವುಳ್ಳವಾಗಿವೆ. ನಾವು ಈ ಅಂಶವನ್ನು ಭಾರತೀಯ ಕೃಷಿಯ ವಿಶ್ಲೇಷಣೆ ಮೂಲಕ ಅರ್ಥ ಮಾಡಿಕೊಳ್ಳ ಬಹುದು.

೧೯೬೦ರ ನಂತರ ಫೋರ್ಡ್ ಪ್ರತಿಷ್ಠಾನ-ವಿಶ್ವಬ್ಯಾಂಕು ಮುಂತಾದವುಗಳ ನೆರವಿನೊಂ ದಿಗೆ ಕೃಷಿಯಲ್ಲಿ ನವೀನ ತಂತ್ರವನ್ನು ಜಾರಿಗೊಳಿಸಲಾಯಿತು. ಸುಧಾರಿತ ತಳಿಗಳು, ರಾಸಾಯನಿಕ ಗೊಬ್ಬರ, ಕೀಟ ರೋಗ ನಾಶಕಗಳು ನೀರಾವರಿ ಮುಂತಾದವುಗಳ ಸಾಂದ್ರ

ಬಳಕೆಯನ್ನು ಆಧಿರಿಸಿದ ಈ ನವೀನ ತಂತ್ರವು ಅತ್ಯಂತ ಅಲ್ಪಅವಧಿಯಲ್ಲಿ ಪವಾಡ ಸದೃಶವಾದ ಫಲ ನೀಡಿತು. ಅದನ್ನೇ ಹಸಿರು ಕ್ರಾಂತಿ ಎನ್ನಲಾಗಿದೆ. ಅದೊಂದು ತಂತ್ರಜ್ಞಾನ ಆಧರಿತ ವಿಧಾನವಾಗಿತ್ತು. ೧೯೬೬ರಿಂದ ೧೯೭೪ರ ವರೆಗೆ ಭಾರತೀಯ ಕೃಷಿ ಕ್ಷೇತ್ರದಲ್ಲಿ ಇಳುವರಿಯು ಉನ್ನತ ಮಟ್ಟಕ್ಕೇರಿತು. ಆಹಾರ ಸಾಮಗ್ರಿಗಳ ಒಟ್ಟು ಉತ್ಪನ್ನ ಸಹ ತೀವ್ರ ಏರಿಕೆಯಾಯಿತು. ಆದರೆ ಇಳುವರಿ ಹಾಗೂ ಉತ್ಪನ್ನದ ಏರಿಕೆಯು ೧೯೭೪ -೭೫ರ ನಂತರ ದುರ್ಬಲಗೊಂಡಿತು. ತಂತ್ರಜ್ಞಾನ ಪ್ರೇರಿತ ಕೃಷಿ ವಿಧಾನವು ಒಂದು ಮಟ್ಟದವರೆಗೆ ಅತ್ಯಂತ ಯಶಸ್ವಿಯಾಗಿ ಫಲನೀಡಿತು. ಆದರೆ ಈ ತಂತ್ರವು ಕೃಷಿಯ ಸಮಸ್ಯೆಯನ್ನು ಪರಿಹರಿಸ ಲಿಲ್ಲ. ಭಾರತದ ಕೆಲವೇ ಭಾಗಕ್ಕೆ ಹಸಿರು ಕ್ರಾಂತಿ ಸೀಮಿತಗೊಂಡಿತು. ಕೆಲವೇ ಬೆಳೆಗಳನ್ನು ಮಾತ್ರ ಅದು ಒಳಗೊಂಡಿತ್ತು. ಅದೊಂದು ದುಬಾರಿ ವಿಧಾನವಾಗಿತ್ತು. ನೀರಾವರಿ ಪ್ರದೇಶಕ್ಕೆ ಮಾತ್ರ ಮಿತಗೊಂಡಿತ್ತು. ದೊಡ್ಡ ಭೂಮಾಲೀಕರು ಇದರ ಲಾಭವನ್ನು ಸಂಪೂರ್ಣವಾಗಿ ತಮ್ಮದಾಗಿಸಿಕೊಂಡರು. ಸಣ್ಣ ಮತ್ತು ಅತಿಸಣ್ಣ ರೈತರಿಗೆ ಇದರಿಂದ ಲಾಭವೇನಾಗಲಿಲ್ಲ. ಕೃಷಿಕಾರ್ಮಿಕರಿಗೆ ಹಸಿರು ಕ್ರಾಂತಿಯ ಫಲದಲ್ಲಿ ಪಾಲು ಸಿಗಲಿಲ್ಲ. ಊಳಿಗಮಾನ್ಯ ವ್ಯವಸ್ಥೆಯಿಂದ ಭಾರತೀಯ ಕೃಷಿ ಬಂಡವಾಳಶಾಹಿ ವ್ಯವಸ್ಥೆಗೆ ಪರಿವರ್ತಿತ ಗೊಂಡಿತು. ಭೂರಹಿತ ಕೃಷಿ ಕಾರ್ಮಿಕರ ಬದುಕು ದುರ್ಭರವಾಯಿತು. ಏಕೆಂದರೆ ಹಸಿರುಕ್ರಾಂತಿ ತಂತ್ರವು ಬಂಡವಾಳ ಸಾಂದ್ರ ತಂತ್ರವಾಗಿತ್ತು.

ಭಾರತೀಯ ಕೃಷಿಯ ಸಮಸ್ಯೆಯು ೧೯೫೦ರ ದಶಕದಲ್ಲಿದ್ದ ರೂಪದಲ್ಲೇ ಇಂದಿಗೂ ಮುಂದುವರಿದಿದೆ. ಹಸಿರು ಕ್ರಾಂತಿಯನ್ನು ನಾವು ಬೇಕಾದರೆ ಒಂದು aberration ಎಂದು ಪರಿಗಣಿಸಬಹುದು. ಭಾರತದ ಗ್ರಾಮೀಣದಲ್ಲಿ ಶೇ. ೮೦ರಷ್ಟು ರೈತರು ಸಣ್ಣ-ಅತಿ ಸಣ್ಣ ರೈತರಾಗಿದ್ದಾರೆ. ಇಂದಿಗೂ ಭಾರತದ ಒಟ್ಟು ಕೃಷಿ ಭೂಮಿಯಲ್ಲಿ ಶೇ. ೬೦ ರಷ್ಟು ಮಳೆಯನ್ನು ಅವಲಂಭಿಸಿಕೊಂಡಿರುವ ಸ್ಥಿತಿಯಲ್ಲಿದೆ. ಗೇಣಿ ಪದ್ಧತಿ ರದ್ದಾಗಿದ್ದರೂ ಸಹಜ ಅದು ಬೇನಾಮಿ ರೂಪದಲ್ಲಿ ಮುಂದುವರಿದಿದೆ. ಭೂಮಿತಿ ಶಾಸನಗಳು ಕೇವಲ ಭಾಷಣಕ್ಕೆ ವಿಷಯಗಳಾಗಿವೆ. ಆಧುನಿಕ ತಂತ್ರಜ್ಞಾನವು ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಪ್ರವೇಶಿ ಸಿದ್ದರಿಂದಾಗಿ ಮಹಿಳೆಯು ತನ್ನ ಅಲ್ಪ ಪ್ರಮಾಣದ ಸಂಪನ್ಮೂಲಗಳ ಮೇಲಿನ ಹತೋ ಟಿಯನ್ನು ಕಳೆದುಕೊಳ್ಳುವಂತಾಯಿತು. ಲಾಗಾಯ್ತಿನಿಂದ ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆಯು ಹೆಣ್ಣುಮಕ್ಕಳ ಕಸುಬಾಗಿತ್ತು. ಆದರೆ ಇಂದು *ಡೈರಿ* ಯ ಆಗಮನದಿಂ ದಾಗಿ ಹೈನುಗಾರಿಕೆಯು ಪುರುಷನ ವಶವಾಯಿತು. ಕೃಷಿಯಲ್ಲಿ ಹೆಣ್ಣು ಮಕ್ಕಳೇ ಮಾಡ ಬೇಕಾಗಿದ್ದ ಸಸಿನೆಡುವ, ಕಳೆಕೀಳುವ ಕೆಲಸಗಳು ಇಂದು ತಂತ್ರಜ್ಞಾನಕ್ಕೆ ಬಲಿಯಾಗಿವೆ. ಊರೊಟ್ಟಿಗಿನ ಜಮೀನು ಹಾಗೂ ತೋಪುಗಳನ್ನು, ಕೆರೆ ಅಂಗಳಗಳನ್ನು ಕಲ್ಲುಗುಡ್ಡಗಳನ್ನು ಪ್ರಭಾವಿ ಭೂಮಾಲೀಕರು ವಶಪಡಿಸಿಕೊಂಡಿದ್ದರಿಂದ ಭೂರಹಿತ ಕೃಷಿಕಾರ್ಮಿಕರ *ಹುರಿ - ಮೇಕೆ* ಸಾಕಾಣಿಕೆ ಅಸಾಧ್ಯವಾಗಿದೆ. ಉರುವಲು ಈಗ ದೊಡ್ಡ ಸಮಸ್ಯೆಯಾಗಿದೆ. ಭಾರ ತೀಯ ಕೃಷಿಯ ಸಮಸ್ಯೆಗಳು ಸ್ವಾತಂತ್ರ್ಯಾನಂತರ ಪರಿಹಾರವಾಗಿಲ್ಲ.

ಎಲ್ಲಿಯವರೆಗೆ ಉತ್ಪಾದನಾ ಸಂಬಂಧಗಳನ್ನು, ಸಂಪನ್ಮೂಲಗಳ ಮೇಲಿನ ಮಾಲೀಕತ್ವದ ಸ್ವರೂಪವನ್ನು ಬದಲಾಯಿಸುವುದಿಲ್ಲವೊ ಅಲ್ಲಿಯವರೆಗೆ ಭಾರತೀಯ ಕೃಷಿಯ ಸಮಸ್ಯೆಗಳು ಬಗೆಹರಿಯುವುದಿಲ್ಲ. ತಂತ್ರಜ್ಞಾನವನ್ನು ನಾವು ಪೂರ್ತಿ ತ್ಯಾಜ್ಯ ಮಾಡಲು ಸಾಧ್ಯವಿಲ್ಲ. ಆದರೆ ಅದೊಂದೆ ಏಕಾಂಗಿಯಾಗಿ ನಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ. ತಂತ್ರಜ್ಞಾನ ಆಧರಿತ ಸುಧಾರಣೆ ಹಾಗೂ ವ್ಯವಸ್ಥೆಯ (ರಾಚನಿಕ) ಸುಧಾರಣೆಗಳ ಸೂಕ್ತ ಸಂಯೋಜನೆಯಿಂದ ರೂಪುಗೊಂಡ ಕಾರ್ಯನೀತಿಯು ಕೃಷಿಯ ಸಮಸ್ಯೆಗಳನ್ನು ನಿವಾರಿಸಬಲ್ಲದು.

ನೀರಾವರಿಗೆ ಸಂಬಂಧಿಸಿದಂತೆಯೂ ಇಂತಹದೇ ವೈರುಧ್ಯ ಇರುವುದನ್ನು ನಾವು ಗಮನಿಸಬಹುದು.

ನೀರಾವರಿಯು ನಮ್ಮ ದೇಶದಲ್ಲಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಮಸ್ಯೆಯಾಗಿಬಿಟ್ಟಿದೆ. ನೀರಾವರಿ ಯೋಜನೆಗಳ ನಿರ್ಮಾಣ, ಅದರ ಮೇಲೆ ತೊಡಗಿಸಿದ ಹಣ, ಸಣ್ಣ V/s ದೊಡ್ಡ ನೀರಾವರಿ ಯೋಜನೆ ವಿವಾದ, ಪರಿಸರ ಅಸಮತೋಲನ-ಮುಂತಾದವು ನೀರಾವರಿ ಸಮಸ್ಯೆಯಲ್ಲಿ ಮುಖ್ಯವಾಗಿ ಬಿಟ್ಟಿದ್ದಾವೆ. ನೀರಾವರಿ ಯೋಜನೆಗಳಲ್ಲಿ ಫಲಾನುಭವಿಗಳ ಉತ್ಪಾದನಾ ಸಂಬಂಧಗಳು, ನೀರಾವರಿ ಸಾಮರ್ಥ್ಯದ ಬಳಕೆ, ಬೆಳೆಪದ್ಧತಿಗಳು ಮುಂತಾದ ಸಾಮಾಜಿಕ-ಆರ್ಥಿಕ ಪ್ರಶ್ನೆಗಳು ನಮಗೆ ಮುಖ್ಯವಾಗಲೇ ಇಲ್ಲ. ನೀರಾವರಿ ಸೃಷ್ಟಿಸುತ್ತಿರುವ ವಾಣಿಜ್ಯ ಬೆಳೆಗಳ ಪ್ರಭಾವ, ಆಹಾರ ಬೆಳೆಗಳ ಪ್ರದೇಶದ ಕಡಿತ, ನೀರಾವರಿ ಸೌಲಭ್ಯದ ಮೇಲೆ ಉನ್ನತ ವರ್ಗದ ಹಿಡಿತ - ಇವುಗಳ ಕಡೆ ನಮ್ಮ ಗಮನ ಹರಿಯಲೇ ಇಲ್ಲ. ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಸಿದ್ಧಾಂತಗಳು ನೀರಾವರಿಯನ್ನು ಒಂದು ತಾಂತ್ರಿಕ ಸಮಸ್ಯೆಯಾಗಿ ಮಾತ್ರ ಪರಿಭಾವಿಸುತ್ತದೆ. ಇಂತಹ ಸಿದ್ಧಾಂತಗಳ ಮೂಲಕ ಅಭಿವೃದ್ಧಿಶೀಲ ಆರ್ಥಿಕತೆಗಳ ಕೃಷಿ ನೀರಾವರಿ ಸಮಸ್ಯೆಗಳನ್ನು ಪರಿಶೀಲಿಸಲು ಸಾಧ್ಯವಿಲ್ಲ. ನೀರಾವರಿಯನ್ನು ನಮ್ಮ ಸಮಾಜದಲ್ಲಿನ ಭೂಮಾಲೀಕತ್ವ, ಉತ್ಪಾದನಾ ಸಂಬಂಧಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ನೀರಾವರಿ ಸೌಲಭ್ಯದ ಲಾಭ ಯಾವ ವರ್ಗಕ್ಕೆ ದೊರೆಯುತ್ತಿದೆ? ನೀರಾವರಿಯ ದುಷ್ಪರಿಣಾಮಗಳು ಯಾವ ವರ್ಗದ ಮೇಲಾಗುತ್ತಿದೆ? ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಭಾರತೀಯ ನೀರಾವರಿ ವ್ಯವಸ್ಥೆಯ ವಿಶ್ಲೇಷಣೆ ನಡೆಯಬೇಕಾಗಿದೆ. ನೀರಾವರಿ ಯೋಜನೆಗಳಿಂದ ನೆಲ-ನೆಲೆ ಕಳೆದುಕೊಳ್ಳುತ್ತಿರುವವರು ಭೂರಹಿತ ಕಾರ್ಮಿಕರು. ನೀರಾವರಿ ಯೋಜನೆಗಳಲ್ಲಿ ಮುಳುಗಡೆಯಾಗುವ ಅರಣ್ಯ ಪ್ರದೇಶದಲ್ಲಿನ ಅರಣ್ಯ ಪ್ರದೇಶದಿಂದ ಗುಳೆ ಹೋಗಬೇಕಾದವರು ಬುಡಕಟ್ಟುಜನ. ನೀರಾವರಿ ಪ್ರದೇಶದಲ್ಲಿನ ಕೃಷಿಯು ಬಂಡವಾಳ ಸಾಂದ್ರವಾದುದರಿಂದ ಉದ್ಯೋಗ ಕಳೆದುಕೊಳ್ಳುವವರು ಭೂರಹಿತ ಕಾರ್ಮಿಕರು. ನೀರಾವರಿ ಪ್ರದೇಶಗಳಲ್ಲಿ ಮಹಿಳಾ ಕಾರ್ಮಿಕರ ಕೆಲಸಗಳು ನೆಲಸಮವಾಗಿ ಬಿಡುತ್ತವೆ. ನೀರಾವರಿಯು ಸೃಷ್ಟಿಸಿರುವ

ಈ ಅಪಾಕಾರಿ ಪರಿಣಾಮಗಳು ಅಭಿವೃದ್ಧಿ ಸಿದ್ಧಾಂತದಲ್ಲಿ ಮಹತ್ವ ಪಡೆದುಕೊಳ್ಳಲಿಲ್ಲ. 'ಅದು ಸಾಧ್ಯವೂ ಇರಲಿಲ್ಲ. ಏಕೆಂದರೆ ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಸಿದ್ಧಾಂತಗಳು ನೇರವಾಗಿ ಪಾಶ್ಚಿಮಾತ್ಯ ಸಮಾಜದ ಗತಿಶೀಲತೆಯನ್ನು ಗುರುತಿಸುವ ಸಲುವಾಗಿ ರೂಪು ಗೊಂಡಿದ್ದವು. ಭಾರತದ ಸಮಸ್ಯೆಗಳಿಗೆ ಕಾರಣಗಳನ್ನು ಹಾಗೂ ಪರಿಹಾರಗಳನ್ನು ನಾವು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲೇ ಹುಡುಕಬೇಕಾಗಿದೆ. ಸಾಮಾಜಿಕ - ಆರ್ಥಿಕ- ರಾಜಕೀಯ-ಸಾಂಸ್ಕೃತಿಕ ಅಸಾಮರ್ಥಗಳಿಂದ ವಿಕಲರಾಗಿರುವ ಕೆಳವರ್ಗ, ಕೆಳಜಾತಿ ವರ್ಗಗಳು ನೀರಾವರಿಯಂತಹ ಅಭಿವೃದ್ಧಿ ಯೋಜನೆ ಹಡೆಯುವ ಫಲಗಳನ್ನು ತಮ್ಮದಾಗಿಸಿಕೊಳ್ಳಲು ಸಾಧ್ಯವಿಲ್ಲ. ಇಲ್ಲಿ ನೀರಾವರಿ ಯೋಜನೆಗಳ ವಿರುದ್ಧ ನಾನು ವಾದ ಮಾಡುತ್ತಿದ್ದೇನೆ ಎಂದು ಭಾವಿಸುವ ಅವಶ್ಯಕತೆ ಇಲ್ಲ. ಅಭಿವೃದ್ಧಿ ಕಾರ್ಯಕ್ರಮಗಳು ಸೃಷ್ಟಿಸುತ್ತಿರುವ ವಿಷಮತೆ, ವೈರುಧ್ಯದ ಕಡೆ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದೇನೆ. ಭಾರತದ ಬಡತನ, ಹಸಿವು, ಅಸಮಾನತೆ, ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ಪರಿಪೂರ್ಣವಾಗಿ ಗ್ರಹಿಸಲು ಹಾಗೂ ವಿಶ್ಲೇಷಿಸಲು ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಸಿದ್ಧಾಂತ ಸಮರ್ಥವಾಗಿಲ್ಲ ಎಂಬುದನ್ನು ತೋರಿಸಲು ಪ್ರಯತ್ನಿಸುತ್ತಿದ್ದೇನೆ. ನೀರಾವರಿಯನ್ನು ಕೇವಲ ತಂತ್ರಜ್ಞಾನದ ಸಮಸ್ಯೆಯನ್ನಾಗಿ ಸಂಕುಚಿತಗೊಳಿಸುವುದರಲ್ಲೇ ನಾವು ನವ ಅಭಿಜಾತ ಅರ್ಥಶಾಸ್ತ್ರ ಆಧರಿತ ಅಭಿವೃದ್ಧಿ ಸಿದ್ಧಾಂತದ ಅಸಾಮರ್ಥ್ಯವನ್ನು ತಿಳಿದುಕೊಳ್ಳಬಹುದು. ಒಂದು ಅಸಮ ಹಾಗೂ ಶ್ರೇಣೀಕೃತ ವ್ಯವಸ್ಥೆಯಲ್ಲಿ ತಾಂತ್ರಿಕ ಬೆಳವಣಿಗೆಗಳು ಅಸಮಾನತೆ ಮತ್ತು ಏಣಿ ಶ್ರೇಣಿಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ.

ಅಭಿವೃದ್ಧಿ ಶೀಲ ಆರ್ಥಿಕತೆಗಳ ಅಭಿವೃದ್ಧಿಯ ಸಂವಾದದಲ್ಲಿ ತೀವ್ರ ಚರ್ಚೆಗೆ ಒಳಗಾಗಿರುವ ಅಂಶವೆಂದರೆ ಈ ಸಮಾಜಗಳಲ್ಲಿನ ಧಾರ್ಮಿಕವೆನ್ನಬಹುದಾದ ಆಧ್ಯಾತ್ಮಿಕ ನಂಬಿಕೆ ವಿಚಾರಗಳಾಗಿವೆ. ಭಾರತದಂತಹ ಸಂಪ್ರದಾಯ ಶೀಲ, ಅಂತರ್ಮುಖಿ ಆರ್ಥಿಕತೆಯ ಅಭಿವೃದ್ಧಿಗೆ ಅಲ್ಲಿನ ಧಾರ್ಮಿಕ ಆಧ್ಯಾತ್ಮಿಕ ನಂಬಿಕೆಗಳು ದೊಡ್ಡ ತೊಡಕು ಕಂಟಕಗಳಾಗಿವೆ ಎಂಬುದು ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಪ್ರತೀತಿಯಾಗಿದೆ. ಅಲ್ಲಿನ ನಂಬಿಕೆಗಳು, ಆಚರಣೆಗಳು, ವ್ಯವಸ್ಥೆಗಳೆಲ್ಲಾ ಪ್ರತಿಗಾಮಿ - ಜೀವವಿರೋಧಿ ಎಂದು ಗುರುತಿಸಲಾಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯು ಜಡವಾದಿ ಹಾಗೂ ಯಥಾ ಸ್ಥಿತಿವಾದಿ ಎಂದು ಪ್ರಚುರಪಡಿಸಲಾಗಿದೆ. ಇವೆಲ್ಲಾ ಅಭಿವೃದ್ಧಿ, ಪರಿವರ್ತನೆ ವಿರೋಧಿ ಶಕ್ತಿಗಳು ಎನ್ನಲಾಗಿದೆ.

ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತಗಳಿಗೆ ನಮ್ಮ ಸಮಾಜದ ಧಾರ್ಮಿಕ, ಆಧ್ಯಾತ್ಮಿಕ ನಂಬಿಕೆ ಆಚರಣೆಗಳೆಂದರೆ ಕೇವಲ ವೈದಿಕ ಸಂಸ್ಕೃತಿಯ ನಂಬಿಕೆ ಆಚರಣೆಗಳಾಗಿವೆ. ಭಾರತೀಯ ಸಂಸ್ಕೃತಿಯೆಂದರೆ ವೈದಿಕ ಸಂಸ್ಕೃತಿ ಎಂಬ ತಪ್ಪು ಕಲ್ಪನೆ ಸೃಷ್ಟಿಯಾಗಿದೆ. ವಸಾಹತುಶಾಹಿ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯ ವಿದ್ವಾಂಸರು ವೈದಿಕ ಸಂಸ್ಕೃತಿಯನ್ನು

ಭಾರತದ ಪ್ರಾತಿನಿಧಿಕ ಸಂಸ್ಕೃತಿಯನ್ನಾಗಿ ಸ್ವೀಕರಿಸಿದರು. ವೇದ, ಉಪನಿಷತ್ತು, ಕರ್ಮ ಸಿದ್ಧಾಂತ, ಶಂಕರಾಚಾರ್ಯ, ಯಜ್ಞ, ಯಾಗಗಳೇ ಸಂಸ್ಕೃತಿಯ ಅಂಗಗಳಾಗಿಬಿಟ್ಟವು. ಪಾಶ್ಚಿಮಾತ್ಯ ವಿದ್ವಾಂಸರಿಗೆ ಅಂತಹ ಒಂದು ಏಕೀಕೃತ ಏಕರೂಪತೆಯಿಂದ ಕೂಡಿದ ಒಂದು ಪರಿಕಲ್ಪನೆ ಬೇಕಾಗಿತ್ತು. ಭಾರತೀಯ ಸಮಾಜದ ಅವೈದಿಕ ನಂಬಿಕೆ ಆಚರಣೆಗಳನ್ನು ಪಾಶ್ಚಿಮಾತ್ಯ ವಿದ್ವಾಂಸರು ತಮ್ಮ ಸಿದ್ಧಾಂತ ತತ್ವಗಳಲ್ಲಿ ಅರಗಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಏಕಶಿಲಾ ಸ್ವರೂಪದ ವೈದಿಕ ಸಂಸ್ಕೃತಿಯ ಆಕೃತಿಯು ಪಾಶ್ಚಿಮಾತ್ಯ ಸಂಸ್ಕೃತಿಯ ನಗರೀಕರಣ ಹಾಗೂ ಕೈಗಾರಿಕೀಕರಣ ವ್ಯವಸ್ಥೆಗೆ ಸಮಾನವಾಗಿತ್ತು. ಬಹುಮುಖೀ ಸ್ವರೂಪದ ಅವೈದಿಕ ಸಂಸ್ಕೃತಿಯ ಸಂಕೀರ್ಣ ಆಕೃತಿಯು ಪಾಶ್ಚಿಮಾತ್ಯ ಸಂಸ್ಕೃತಿಗೆ ಭಿನ್ನವಾಗಿತ್ತು.

ವೈದಿಕ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಲ್ಲ. ವೈದಿಕ ಸಂಸ್ಕೃತಿಯನ್ನು ಪ್ರಾತಿನಿಧಿಕವೆಂದು ಭಾವಿಸಿ ಅದನ್ನು *ಯಥಾ ಸ್ಥಿತಿವಾದಿ* ಎಂದು ತೀರ್ಮಾನಿಸಿದ ಪಾಶ್ಚಿಮಾತ್ಯ ವಿದ್ವಾಂಸರ ವಿಚಾರ ಸರಿಯೆಂದು ತೋರುವುದಿಲ್ಲ. ಭಾರತೀಯ ಸಮಾಜದ ಸಂದರ್ಭದಲ್ಲಿ ಪಾಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತ ಗುರುತಿಸಿದ್ದ ಧಾರ್ಮಿಕ, ಆಧ್ಯಾತ್ಮಿಕ ನಂಬಿಕೆಗಳು ಆಚರಣೆಗಳು ವಿಚಾರ ಕೇವಲ ಒಂದು ವರ್ಗದ ಅದರಲ್ಲೂ ಮೇಲುಸ್ತರದಲ್ಲಿದ್ದ ಪುರೋಹಿತವರ್ಗದ ನಂಬಿಕೆಯಾಗಿದ್ದವು.

ನಮ್ಮ ಸಮಾಜವನ್ನು *ಜಡವಾದಿ, ಯಥಾಸ್ಥಿತಿವಾದಿ, ಪ್ರತಿಗಾಮಿ* ಎಂದು ಗುರುತಿಸುವ ಈ ವಿದ್ವಾಂಸರಿಗೆ ನಮ್ಮ ಚರಿತ್ರೆಯ ವಿವಿಧ ಘಟ್ಟಗಳಲ್ಲಿ ವಿವಿಧ ವರ್ಗಗಳು *ವೈದಿಕ ಸಂಸ್ಕೃತಿ*ಯನ್ನು ತತ್ವ ಆಚರಣೆ ಎರಡೂ ನೆಲೆಗಳಲ್ಲಿ ವಿರೋಧಿಸಿದ್ದು ಕಾಣುವುದೇ ಇಲ್ಲ. ಚರಿತ್ರೆಯ ವಿವಿಧ ಘಟ್ಟಗಳಲ್ಲಿ ನಮ್ಮ ಸಮಾಜ ಎದುರಿಸಿದ ಸ್ಥಿತ್ಯಂತರ ಚಲನೆಯನ್ನು ಪಾಶ್ಚಿಮಾತ್ಯ ವಸಹಾತುಶಾಹಿ ಚಿಂತನೆ ಗುರುತಿಸುವುದೇ ಇಲ್ಲ. ನಮ್ಮ ಸಮಾಜದ ಅವೈದಿಕ ಸಂಸ್ಕೃತಿಯು ಪ್ರತಿಗಾಮಿಯಾಗಿರಲಿಲ್ಲ ಹಾಗೂ ಅವೈದಿಕ ಸಂಸ್ಕೃತಿಯು ಕಾಲ ಕಾಲಕ್ಕೆ ಸಾಮಾಜಿಕ ವ್ಯವಸ್ಥೆಯನ್ನು ಅತ್ಯಂತ ಗತಿಶೀಲವಾಗಿಟ್ಟುಕೊಳ್ಳಲು ಪ್ರಯತ್ನಿಸಿದ್ದು ತುಂಬಾ ಮುಖ್ಯ. ಪಾಶ್ಚಿಮಾತ್ಯ ಚಿಂತಕರಿಗೆ ಭಾರತೀಯ ಸಮಾಜದಲ್ಲಿನ ಧರ್ಮದ ಪುರೋಹಿತ ಶಾಹಿ ಹಾಗೂ ಸುಧಾರಣಾವಾದಿ ಭಿನ್ನ ಮುಖಗಳನ್ನಾಗಲಿ ಅಥವಾ ಉನ್ನತ ಜಾತಿ, ಕೆಳಜಾತಿಗಳ ನೆಲೆಯಲ್ಲಿನ ಧರ್ಮದ ವಿಭಿನ್ನ ಸ್ವರೂಪಗಳನ್ನಾಗಲಿ ಆಳವಾಗಿ ವಿಶ್ಲೇಷಿಸಲು ಸಾಧ್ಯವಾಗಲೇ ಇಲ್ಲ.

ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಸಿದ್ಧಾಂತಗಳು ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕ ನಂಬಿಕೆಗಳು ಇಲ್ಲಿ ಅಭಿವೃದ್ಧಿಗೆ ಕಂಟಕ ತೊಡಕುಗಳಾಗಿವೆ ಎನ್ನುವುದರ ಮೂಲಕ ಅಭಿವೃದ್ಧಿಗಿರುವ ನಿಜವಾದ ಮತ್ತು ಮೂರ್ತವಾದ ವಸಾಹತುಶಾಹಿ ಹಿನ್ನೆಲೆ, ಸಾಮ್ರಾಜ್ಯಸಾಹಿ ಶೋಷಣೆ, ಅಂತರಾರಾಷ್ಟ್ರೀಯ ಹಿತಾ

ಸಕ್ತಿಗಳು ಮುಂತಾದವುಗಳ ಪಾತ್ರವನ್ನು ಮರೆಮಾಡಲು ಪ್ರಯತ್ನಿಸಿದ್ದಾವೆ. ವಹಾಸಹತುಶಾಹಿ ಕಾಲದಲ್ಲಿ ಭಾರತವು ಅನುಭವಿಸಿದ ಕೈಗಾರಿಕಾ ವಿಗತಿ (De -industrialisation) ಯನ್ನು ಇವು ಮರೆಯುತ್ತವೆ. ವಸಹಾತುಶಾಹಿ ಹಾಗೂ ಸಾಮ್ರಾಜ್ಯಶಾಹಿಯು ಭಾರತದಂತಹ ಆರ್ಥಿಕತೆಗಳ ಅಭಿವೃದ್ಧಿಗೆ ಒಡ್ಡಿರುವ ಸವಾಲು ಸಂಕಷ್ಟಗಳನ್ನು ಉದ್ದೇಶ ಪೂರ್ವಕವಾಗಿ ಮರೆಮಾಡಲಾಗಿದೆ. ಮರೆಮಾಡುವ ಕಾರಣದಿಂದಾಗೆ ಧಾರ್ಮಿಕ, ಆಧ್ಯಾತ್ಮಿಕ ನಂಬಿಕೆ, ಆಚರಣೆಗಳ ಪ್ರತಿಗಾಮಿ ಸ್ವರೂಪವನ್ನು ಉತ್ಪ್ರೇಕ್ಷಿಸಲಾಗಿದೆ. ಪಾಶ್ಚಿಮಾತ್ಯ ವಿದ್ವಾಂಸರ ಈ ರೀತಿಯ ಜಡವ್ಯವಸ್ಥೆಯ ವಾದವನ್ನು ಅನುಕರಿಸುತ್ತಿರುವ ದೇಶಿ ವಿದ್ವಾಂಸರೂ ಸಹ ನಂಬಿಕೆ ಆಚರಣೆ, ಧಾರ್ಮಿಕ ವಿಚಾರಗಳಿಗೆ ದೋಷವನ್ನು ಆರೋಪಿಸುವ ಪರಿಪಾಠ ಬೆಳೆಸಿಕೊಂಡು ಬಿಟ್ಟಿದ್ದಾರೆ. ಧಾರ್ಮಿಕ, ಆಧ್ಯಾತ್ಮಿಕ, ನಂಬಿಕೆಗಳು ಅಭಿವೃದ್ಧಿಗೆ ತೊಡಕಾಗಿಲ್ಲ ಎಂದು ನಾನು ವಾದ ಮಾಡುತ್ತಿಲ್ಲ. ಆದರೆ ಪಾಶ್ಚಿಮಾತ್ಯ ವಿದ್ವಾಂಸರು ಯಾವ ಉದ್ದೇಶಕ್ಕೆ ಈ ವಾದ ಮಂಡಿಸಿದರು ಎಂಬುದನ್ನು ತೋರಿಸುವುದು ನನ್ನ ಉದ್ದೇಶವಾಗಿದೆ. ವೈದಿಕ ನಂಬಿಕೆ ಆಚರಣೆಗಳನ್ನು ಭಕ್ತಿ ಪಂಥದಂತಹ ಚಳುವಳಿ ಪ್ರಶ್ನೆ ಮಾಡಿತು. ಆದರೆ ಅವೈದಿಕ ಮೂಲದ ನಂಬಿಕೆ ಆಚರಣೆ ಚಳುವಳಿಗಳು ವೈದಿಕ ಸಂಸ್ಕೃತಿಯನ್ನು ಪಲ್ಲಟಗೊಳಿಸುವಷ್ಟು ಸಮರ್ಥವಾಗಿರಲಿಲ್ಲ. ಅವೈದಿಕ ಮೂಲದಿಂದ ಹೊರಟ ಕೆಲವು ಪ್ರತಿಭಟನೆಗಳನ್ನು ವೈದಿಕ ಸಂಸ್ಕೃತಿಯು ಆಪೋಶನ ಮಾಡಿಬಿಟ್ಟಿತು. ಅಭಿವೃದ್ಧಿ ಮತ್ತು ಧಾರ್ಮಿಕ ಆಧ್ಯಾತ್ಮಿಕ ನಂಬಿಕೆ ಆಚರಣೆಗಳ ನಡುವಿನ ಸಂಬಂಧಗಳು ಪಾಶ್ಚಿಮಾತ್ಯ ವಿದ್ವಾಂಸರು ತಿಳಿದುಕೊಂಡಿರುವಷ್ಟು ಸರಳವಾಗಿಲ್ಲ.

ಮೂಲಧಾರೆ ಅರ್ಥಶಾಸ್ತ್ರ ಕೇಂದ್ರಿತ ಅಭಿವೃದ್ಧಿ ಸಿದ್ಧಾಂತಗಳು ಉತ್ಪನ್ನ ಅಂದರೆ ಜಿ.ಎನ್.ಪಿ (ಒಟ್ಟು ರಾಷ್ಟ್ರೀಯ ಉತ್ಪನ್ನ) ಹಾಗೂ ಹಂಚಿಕೆ ಪ್ರಶ್ನೆಗಳನ್ನು ಬೇರ್ಪಡಿಸಿ ನೋಡಲಿಲ್ಲ. ಉತ್ಪಾದನೆಯಂತೆ ಹಂಚಿಕೆಯ ಹೊಣೆಯನ್ನು ಮಾರುಕಟ್ಟೆಯ ವಶಕ್ಕೆ ಒಪ್ಪಿಸಲಾಗಿದೆ. *ಉತ್ಪಾದನೆ ಮೊದಲು, ಹಂಚಿಕೆ ಅನಂತರ* ಎಂಬುದನ್ನು ನಂಬಿಕೊಂಡ ನವ ಅಭಿಜಾತ ಅರ್ಥಶಾಸ್ತ್ರ ಅಭಿವೃದ್ಧಿಯ ಗತಿಯಲ್ಲಿ ಹಾಗೂ ಸಂರಚನೆಯಲ್ಲಿ ಯಾವುದೇ ರೀತಿಯ ಘರ್ಷಣೆ, ವೈರುಧ್ಯ, ವಿಷಮತೆಗಳನ್ನು ಗುರುತಿಸಲಿಲ್ಲ. ಅಭಿವೃದ್ಧಿಯು ಸೌಹಾರ್ದಯುತವಾಗಿ ತನ್ನ ಫಲವನ್ನು ಸಮಾಜದ ಎಲ್ಲಾ ಸ್ತರದ ಎಲ್ಲಾ ವರ್ಗ ವಲಯಗಳಿಗೂ ಪಸರಿಸುತ್ತದೆ ಎಂದು ನಂಬಿಲಾಗಿತ್ತು. ಜಿಎನ್.ಪಿಯು ಸಾವಕಾಶವಾಗಿ ಆದರೆ ಖಚಿತವಾಗಿ ಮೇಲಿನಿಂದ ಕೆಳಮುಖವಾಗಿ ಫಲವನ್ನು ತೊಟ್ಟಿಕ್ಕಿಸುತ್ತದೆ ಎಂದು ಭಾವಗರ್ಭಿತವಾಗಿ ಬೋಧಿಸಲಾಯಿತು. ಬಡತನ, ಹಸಿವು, ನಿರುದ್ಯೋಗಗಳಿಗೆ ಪರಿಹಾರ ಜಿ.ಎನ್.ಪಿ.ಯ ಪ್ರಮಾಣವನ್ನು ಹೆಚ್ಚಿಸುವುದು, ಜಿಎನ್.ಪಿ.ಯ ವಾರ್ಷಿಕ ಏರಿಕೆ ದರವನ್ನು ಅಧಿಕಗೊಳಿಸುವುದು ಎಂದು ವಾದ ಮಾಡಲಾಯಿತು. ೧೯೫೦-೬೦ರ ದಶಕಗಳಲ್ಲಿ ಇಂತಹ Trickle down effect ವಿವರಣೆಯನ್ನು ಭಾರತವೂ ಸೇರಿದಂತೆ ಎಲ್ಲಾ ಅಭಿವೃದ್ಧಿ ಶೀಲ ದೇಶಗಳೂ ನಂಬಿದ್ದವು. ಆದರೆ ಜಿಎನ್‌ಪಿಯ ಫಲ ಸಮಾಜದ ಕೆಳಸ್ತರ,

ಕೆಳಜಾತಿ, ವರ್ಗಗಳಿಗೆ ದೊರಕಲಿಲ್ಲ. ವಾಸ್ತವವಾಗಿ ಅಭಿವೃದ್ಧಿ ಫಲ ಮೇಲಿನಿಂದ ಕೆಳಮುಖವಾಗಿ *ತೊಟ್ಟಿಕ್ಕಿದ್ದರೆ* ಭಾರತದಂತಹ ವ್ಯವಸ್ಥೆಯಲ್ಲಿ ಬಡತನ, ಹಸಿವುಗಳನ್ನು ನಿವಾರಿಸಲು ಸಾಧ್ಯವಿಲ್ಲ. ಅಭಿವೃದ್ಧಿಯ ಫಲ ಪ್ರವಾಹ ದೋಪಾದಿಯಲ್ಲಿ ಹರಿದಾಗ ಮಾತ್ರ ಹಸಿವು, ಬಡತನ ನಿವಾರಣೆಯಾಗಬಹುದು. ಅಸಮ ಹಾಗೂ ಶ್ರೇಣೀಕೃತ ಸಮಾಜದಲ್ಲಿ ಇಂತಹ ಜಿಎನ್‌ಪಿಯು ತೊಟ್ಟಿಕ್ಕಿಸಿರುವ ಹನಿಗಳು ಸಮಾಜದ ಕೆಳವರ್ಗವನ್ನು ತಲುಪಲು ಸಾಧ್ಯವಿಲ್ಲ. ಉತ್ಪಾದನಾ ಸಂಬಂಧಗಳೂ ಎಲ್ಲಿಯವರೆಗೆ ಜಮೀನ್ದಾರಿ, ಉಳಿಗಮಾನ ಸ್ವರೂಪದ್ದಾಗಿರುತ್ತದೆಯೋ ಅಲ್ಲಿಯವರೆಗೆ ಜಿಎನ್‌ಪಿಯ ಫಲ ಸಮಾಜದ ಮೇಲುಪ್ಪರಿಗೆಯಲ್ಲಿ ಹೆಪ್ಪುಗಟ್ಟಿಕೊಂಡು ಬಿಡುತ್ತದೆ.

ಭಾರತದಂತಹ ಅಭಿವೃದ್ಧಿ ಶೀಲ ಆರ್ಥಿಕತೆಯಲ್ಲಿ ಜಿಎನ್‌ಪಿ (ಉತ್ಪನ್ನ) ಹಾಗೂ ಹಂಚಿಕೆ (ಸಮಾನತೆ) ಉದ್ದೇಶಗಳೆರಡನ್ನು ಏಕಕಾಲದಲ್ಲಿ ದಕ್ಕಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಅಭಿವೃದ್ಧಿಯ ಫಲ ತನ್ನಷ್ಟಕ್ಕೆ ತಾನೇ ಸಹಜವಾಗಿ ಸಮಾಜದ ಎಲ್ಲಾ ವರ್ಗಗಳಿಗೂ ದೊರೆಯುತ್ತದೆ ಎಂಬುದು ಒಂದು ಭ್ರಮೆ. ಉತ್ಪನ್ನ, ಹಂಚಿಕೆಗಳೆರಡರ ದೃಷ್ಟಿಯಿಂದಲೂ *ಸರ್ಕಾರದ ಹಸ್ತಕ್ಷೇಪ* ಅತ್ಯಂತ ಅನಿವಾರ್ಯವಾಗಿರುವ ಪರಿಸ್ಥಿತಿ ಅಭಿವೃದ್ಧಿ ಶೀಲ ದೇಶಗಳಲ್ಲಿದೆ.

ನವ ಅಭಿಜಾತ ಅರ್ಥಶಾಸ್ತ್ರ ಆಧರಿತ ಅಭಿವೃದ್ಧಿ ಸಿದ್ಧಾಂತಗಳು ಸರ್ಕಾರದ ಪಾತ್ರವನ್ನು ಗೌಣವಾಗಿಸಿವೆ. ಶುದ್ಧ ಬಂಡವಾಳಶಾಹಿಯು ಸರ್ಕಾರರಹಿತ ವ್ಯವಸ್ಥೆಯಾಗಿದೆ. ಖಾಸಗೀ ಕ್ಷೇತ್ರ ಹಾಗೂ ವ್ಯಕ್ತಿ ವಿಶಿಷ್ಟತೆಗಳಿಂದ ಆಳಲ್ಪಡುವ ಆರ್ಥಿಕತೆ *ನಿಜವಾಗಿ ಸರ್ಕಾರ ರಹಿತ* ವ್ಯವಸ್ಥೆ, ಆದರೆ ಬಂಡವಾಳಶಾಹಿ ಚರಿತ್ರೆಯಲ್ಲಿ ಇಂತಹ ಶುದ್ಧ ಸನ್ನಿವೇಶ ಸೃಷ್ಟಿಯಾಗಲೇ ಇಲ್ಲ. ಸರ್ಕಾರ ಹೆಚ್ಚು ಹೆಚ್ಚು ಪ್ರಬಲವಾಗುತ್ತಿರುವ ಹೆಚ್ಚು ಹೆಚ್ಚು ಅಧಿಕಾರವನ್ನು ವಶಪಡಿಸಿಕೊಳ್ಳುತ್ತಿರುವ ವಾಸ್ತವ ನಮ್ಮ ಮುಂದಿದೆ. ಸಾರ್ವಜನಿಕ ವಲಯದ ಅದಕ್ಷತೆ ಬಗ್ಗೆ, ಬಿಳಿಯಾನೆ ಸ್ವರೂಪದ ಬಗ್ಗೆ ಮಾತನಾಡುವ ಖಾಸಗೀಕರಣದ ಪ್ರಭುತಿಗಳು *ಸರ್ಕಾರ*ವನ್ನು ಮಾತ್ರ ಬಯಸುತ್ತವೆ. ಖಾಸಗೀಕರಣ, ಗ್ಲೋಬಲೈಸೇಷನ್ ಪ್ರಭುತಿಗಳಿಗೆ ಸಾರ್ವಜನಿಕ ವಲಯ ಬೇಡ, ಸರ್ಕಾರ ಬೇಕು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸರ್ಕಾರವನ್ನು ಕೇವಲ *ಆಸ್ತಿ* ರಕ್ಷಣೆಗಾಗಿ ಮಾತ್ರ ಕಲ್ಪಿಸಿಕೊಳ್ಳಲಾಗಿದೆ. ಆಸ್ತಿ ಪಾಸ್ತಿಯುಳ್ಳ ಉನ್ನತ ವರ್ಗದ ಹಿತಾಸಕ್ತಿಯನ್ನು ರಕ್ಷಿಸುವ ಸಲುವಾಗಿ ಸರ್ಕಾರ ಬೇಕು. ಶತ್ರು ರಾಷ್ಟ್ರಗಳಿಂದ ಉಂಟಾಗುವ ಆಕ್ರಮಣದಿಂದ ದೇಶವನ್ನು ರಕ್ಷಿಸಲು ಸರ್ಕಾರಬೇಕು.

ಆದರೆ ಅಭಿವೃದ್ಧಿ ಶೀಲ ಆರ್ಥಿಕತೆಗಳಲ್ಲಿ ಸರ್ಕಾರವು ಅತ್ಯಂತ ಜವಾಬ್ದಾರಿಯುತವಾದ ಕಾರ್ಯಭಾರ ನಿರ್ವಹಿಸಬೇಕಾಗಿದೆ. ಅದರಲ್ಲೂ ಆರೋಗ್ಯ, ಶಿಕ್ಷಣ, ಆಹಾರಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಸ್ತಕ್ಷೇಪ ಇಲ್ಲಿ ಕೇವಲ ಅಪೇಕ್ಷಣೀಯ ವಷ್ಟೇಯಲ್ಲ, ಅದು ಅನಿವಾರ್ಯಕೂಡ. ಖಾಸಗೀ ವಲಯ ಅದೆಷ್ಟೆ ದಕ್ಷತೆ ಹಾಗೂ ಲಾಭದಾಯಕವಾಗಿ

ನಡೆದರೂ ಸಹ ಆರೋಗ್ಯ ಕ್ಷೇತ್ರದಲ್ಲಿ ತೃತೀಯ ಜಗತ್ತಿನ ಸರ್ಕಾರಗಳು ಸಲ್ಲಿಸುತ್ತಿರುವ ಸೇವೆಯನ್ನು ಸರಿಗಟ್ಟಲಾರವು. ಪ್ಲೇಗು, ಮಲೇರಿಯಾ, ಸಿಡುಬು, ಕಾಲರ ಮುಂತಾದ ಸಾಂಕ್ರಾಮಿಕ ಹಾಗೂ ಭಯಂಕರ ರೋಗಗಳ ನಿವಾರಣೆ ಹಾಗೂ ನಿರ್ಮೂಲನೆಯಲ್ಲಿ ಸರ್ಕಾರ, ವೈದ್ಯಕೀಯ ಇಲಾಖೆಗಳು ಅದ್ಭುತವಾದ ಕಾರ್ಯವೆಸಗಿವೆ. ವಾಸ್ತವಿಕವಾಗಿ ಅಭಿವೃದ್ಧಿಶೀಲ ದೇಶಗಳು ಕೈಗಾರಿಕಾ ಕ್ರಾಂತಿಯನ್ನು ಅನುಭವಿಸುವುದಕ್ಕೆ ಮೊದಲೇ ಸಾರ್ವಜನಿಕ ಆರೋಗ್ಯ ಕ್ರಾಂತಿಯನ್ನು ಸಾಧಿಸಿ ಬಿಟ್ಟಿವೆ. ಹಲವಾರು ತೃತೀಯ ಜಗತ್ತಿನ ದೇಶಗಳಲ್ಲಿನ ಸರಾಸರಿ ಮರಣದರವು ಅಭಿವರ್ಧಿತ ದೇಶಗಳಿಗೆ ಸಮವಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಖಾಸಗೀ ವಲಯದ ಪಾತ್ರವನ್ನು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಆರೋಗ್ಯ ಕ್ಷೇತ್ರದಲ್ಲಿ ಖಾಸಗಿ ವಲಯವು ಸಾರ್ವಜನಿಕ ವಲಯಕ್ಕೆ ಪರ್ಯಾಯವಾಗಲಾರದು.

ಆರೋಗ್ಯಕ್ಕೆ ಹೊಂದಿ ಕೊಂಡಂತೆ ಇರುವ ಮತ್ತೊಂದು ಕ್ಷೇತ್ರವೆಂದರೆ ಆಹಾರ. ಆಹಾರ ಪದಾರ್ಥಗಳ ಸಮರ್ಪಕ ವಿತರಣೆ, ಅವುಗಳ ಬೆಲೆಗಳ ನಿಯಂತ್ರಣ ಮುಂತಾದ ಕ್ಷೇತ್ರಗಳಲ್ಲಿ ಸರ್ಕಾರವು ಮಹತ್ವದ ಪಾತ್ರ ನಿರ್ವಹಿಸಬೇಕಾಗುತ್ತದೆ. ಪ್ರಸಿದ್ಧ ಅರ್ಥ ಶಾಸ್ತ್ರಜ್ಞ, ಅಮೂರ್ತ್ಯಸೇನ್ ಹೇಳುವಂತೆ ಸಾರ್ವಜನಿಕ ಒತ್ತಡಕ್ಕೆ ಸ್ಪಂಧಿಸುವ ಸರ್ಕಾರ ವಿದ್ದಾಗ ಬರಗಾಲ ಆದರಿಂದ ಉಂಟಾಗುವ ಸಾವು, ನೋವುಗಳನ್ನು ತಡೆಯಬಹುದು. ಸ್ವಾತಂತ್ರ್ಯಾನಂತರ ಭಾರತವು *ಬರಗಾಲ*ವನ್ನು ಅನುಭವಿಸಲೇ ಇಲ್ಲ. ಭಾರತವು ಅನುಭ ವಿಸಿದ *ಬರಗಾಲ*ವೆಂದರೆ ೧೯೪೩ರ *ಬಂಗಾಲದ ಕ್ಷಾಮ*. ಆ ಕ್ಷಾಮದಲ್ಲಿ ೩೦ ಲಕ್ಷ ಜನ ಹಸಿವು, ರೋಗಗಳಿಂದ ಅಸುನೀಗಿದರು ಎನ್ನಲಾಗಿದೆ. ಅದೇ ಕೊನೆಯ ಕ್ಷಾಮ. ಆದಾದ ಮೇಲೆ ಆ ಸ್ವರೂಪದ *ಬರ*ವನ್ನು ನಾವು ಎದುರಿಸುವ ಪ್ರಮೇಯ ಬರಲಿಲ್ಲ. ಅಮೂರ್ತ್ಯ ಸೇನ್ ಪ್ರಕಾರ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆ, ಸಾರ್ವಜನಿಕ ಒತ್ತಡ ಹಾಗೂ ಸಮಸ್ಯೆಗಳಿಗೆ ಪರಿಹಾರ ರೂಪಿಸುವ ಜವಾಬ್ದಾರಿ ಹೊತ್ತ ಸರ್ಕಾರ ಇವು ಭಾರತದಲ್ಲಿ ಸ್ವಾತಂತ್ರ್ಯಾನಂತರ *ಬರ* ನಿರ್ಮೂಲವಾಗಲು ಕಾರಣವಾಗಿವೆ. *ಬರ*ವನ್ನು ನಿರ್ಮೂಲನ ಮಾಡಲಾಗಿದೆಯಾದರೂ ತೀವ್ರತರವಾದ ಆಹಾರದ ಕೊರತೆ, ಹಸಿವು, ಅಪೌಷ್ಟಿಕತೆ ಸಮಸ್ಯೆಗಳು ನಮ್ಮ ದೇಶದಲ್ಲಿವೆ. ಆದರೆ *ಬರ*ವನ್ನು ಸಂಪೂರ್ಣವಾಗಿ ನಾಶಮಾಡಲಾಗಿದೆ.

ಇಂದು ಬರಗಾಲ, ಕ್ಷಾಮ, ಡಾಮರಗಳು *ವಿಧಿಲಿಖಿತಶಾಪ* ಎಂಬ ಭಾವನೆ ಮಾಯ ವಾಗುತ್ತಿದೆ. ಬರಗಾಲ, ಕ್ಷಾಮ, ಡಾಮರಗಳಿಂದ ಉಂಟಾಗುವ ಸಾವು, ನೋವುಗಳು ಅನಿವಾರ್ಯ ಮತ್ತು ಅವುಗಳ ನಿರ್ವಹಣೆ ಮನುಷ್ಯ ಏನೂ ಮಾಡಲು ಸಾಧ್ಯವಿಲ್ಲ ಎಂಬ ಭಾವನೆ ತೃತೀಯ ಜಗತ್ತಿನ ದೇಶಗಳಲ್ಲಿ ಇದೆ. ಆದರೆ ಇಂತಹ ನಂಬಿಕೆ, ವಿಚಾರಗಳಿಗೆ ಯಾವುದೇ ಆಧಾರವಿಲ್ಲ. ಕ್ಷಾಮ, ಡಾಮರಗಳನ್ನು ಅವುಗಳ ಪರಿಣಾಮಗಳನ್ನು ತಡೆಯ ಬಹುದು. ಸೂಕ್ತವಾದ ಸಾರ್ವಜನಿಕ ಒತ್ತಡದಿಂದ ಸರ್ಕಾರಗಳು ಬರಗಾಲ ವಿರುದ್ಧ ಕ್ರಮ ತೆಗೆದುಕೊಳ್ಳಬಹುದು.

ಹಸಿವಿನಿಂದ ನರಳುತ್ತಿರುವವರಿಗೆ ಆಹಾರ ಮತ್ತು ಆದಾಯವನ್ನು ಒದಗಿಸುವ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬಹುದು. ಆದರೆ ಸರ್ಕಾರವೊಂದೆ ಎಲ್ಲಾ ಕೆಲಸವನ್ನೂ ಮಾಡುತ್ತದೆಂದು ನಿರೀಕ್ಷಿಸುವುದು ತಪ್ಪು. ಸಮಾಜದ ಇತರೆ ಸಂಸ್ಥೆ, ರಂಗಗಳ ಜೊತೆ ಸರ್ಕಾರದ ಕ್ರಮಗಳನ್ನು ಸಮನ್ವಯಗೊಳಿಸಿಕೊಳ್ಳುವ ಅವಶ್ಯಕತೆ ಇದೆ. ಖಾಸಗಿ ರಂಗದ ಪ್ರಯತವು ಉತ್ಪನ್ನವನ್ನು ಏರಿಸುವುದರಲ್ಲಿ ಯಶಸ್ವಿಯಾದರೆ ಸರ್ಕಾರದ ಪ್ರಯತ್ನವು ಉತ್ಪನ್ನದ ಸೂಕ್ತ ಹಂಚಿಕೆಯಲ್ಲಿ ಯಶಸ್ವಿಯಾಗುತ್ತದೆ. ಇವೆರಡೂ ಒಂದಕ್ಕೊಂದು ಪೂರಕವಾಗಿರಬೇಕೆ ಹೊರತು ಪರ್ಯಾಯವಾಗಿಯಲ್ಲ. ಆದರೆ ಇಂದು ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಅಪಾರವಾದ ಆಕರ್ಷಣೆ ಉಂಟಾಗಿದೆ. ಉದಾರವಾದ, ಖಾಸಗೀಕರಣ, ಗ್ಲೊಬಲೈಸೇಶನ್, ಮುಕ್ತಮಾರುಕಟ್ಟೆ ಇವೆಲ್ಲಾ ಇಂದು ಅತಿಶಯವಾದ ಸ್ಥಾನ ಪಡೆದು ಕೊಂಡು ಬಿಟ್ಟಿವೆ. ಆದರೆ ಈ ವಿಪರೀತ ಪ್ರವಾಹದಲ್ಲಿ ನಾವು ಸಾರ್ವಜನಿಕ ವಲಯವನ್ನು ಸಂಪೂರ್ಣವಾಗಿ ತೊರೆಯುವುದು ಉಚಿತವಾಗಲಾರದು. ಸಾರ್ವಜನಿಕವಲಯ ಸಮರ್ಪ ಕವಾಗಿ ಕೆಲಸ ಮಾಡದಿದ್ದರೆ ಅದು ನಿರ್ವಹಣೆಯ ದೋಷ ಕಾರಣ. ಸರ್ಕಾರವು ಅವುಗಳ ಆಡಳಿತದಲ್ಲಿ ಮೂಗು ತೂರಿಸು ತ್ತಿರುವುದು ಕಾರಣ. ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಆಹಾರ ವಿತರಣೆ ಮುಂತಾದ ಕ್ಷೇತ್ರದಲ್ಲಿ ಸರ್ಕಾರ ಸಾಧಿಸಿರುವ ಸಾಧನೆ ಕಡಿಮೆಯೇನಲ್ಲ. ಸಾರ್ವಜನಿಕ ವಲಯದ ವೈಫಲ್ಯವೇ ಖಾಸಗೀಕರಣಕ್ಕೆ ಸಮರ್ಥ ನೆಯಾಗಲಾರದು.

ಸರ್ಕಾರ ಇರುವುದು ಬಡವರ-ದುರ್ಬಲರ ರಕ್ಷಣೆಗೆ ಹೊರತು ಉಳ್ಳವರ ಜೀವ, ಆಸ್ತಿಯ ರಕ್ಷಣೆಗಲ್ಲ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸರ್ಕಾರವು ಕೇವಲ *ಜೀವ ಆಸ್ತಿ* ರಕ್ಷಣೆಯ ಭಾರ ಹೊರುವ ಒಂದು ಸಂಸ್ಥೆಯಾಗಿ ಬಿಡುತ್ತದೆ. ಆದರೆ ಅಭಿವೃದ್ಧಿ ಶೀಲ ದೇಶಗಳಲ್ಲಿ ಸರ್ಕಾರದ ಪಾತ್ರ ತುಂಬಾ ಮಹತ್ವದ್ದಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸರ್ಕಾರವನ್ನು *ಸಾರ್ವಜನಿಕ ಸಂಸ್ಥೆ* ಎಂಬ ನೆಲೆಯಲ್ಲಿ ಪರಿಭಾವಿಸಲು ಸಾಧ್ಯವಿಲ್ಲ. ಸಾರ್ವಜನಿಕ, ಸಮುದಾಯ ಸ್ವರೂಪದಲ್ಲಿ ಸರ್ಕಾರವನ್ನು ಪರಿಭಾವಿಸುವುದು ಬಂಡವಾಳ ಶಾಹಿ ವ್ಯವಸ್ಥೆಯಲ್ಲಾಗಲಿ ಅಥವಾ ಇಂದು ರೂಪುಗೊಂಡಿರುವ *ಹೊಸ ಆರ್ಥಿಕ* ನೀತಿಯ ಉದಾರವಾದ, ಮುಕ್ತ ಮಾರುಕಟ್ಟೆ, ಗ್ಲೊಬಲೈಸೇಷನ್, ವಿದೇಶಿ ಖಾಸಗಿ ಬಂಡವಾಳ ಮುಂತಾದವುಗಳ ಗೊಂಡಾರಣ್ಯದಲ್ಲಿ ಸಾಧ್ಯವೇ ಇಲ್ಲ. ಅಭಿಜಾತ ಅರ್ಥಶಾಸ್ತ್ರಜ್ಞ ಆಡಂಸ್ಮಿತ್ ಸರಿಯಾಗೆ ಗುರುತಿಸಿರುವಂತೆ ಸರ್ಕಾರ ಅಸ್ತಿತ್ವಕ್ಕೆ ಬಂದುದೆ *ಆಸ್ತಿಯ* ರಕ್ಷಣೆಗಾಗಿ ಎಂಬುದನ್ನು ನೋಡಿದಾಗ ಬಂಡವಾಳಶಾಹಿಯಲ್ಲಿ ಬಡವರ ಆಕ್ರಮಣದಿಂದ ಶ್ರೀಮಂತರನ್ನು ರಕ್ಷಿಸುವ ಸಲುವಾಗೆ ಸರ್ಕಾರ ಇದೆ ಎಂಬುದು ಸ್ಪಷ್ಟವಾಗುತ್ತದೆ. ಸಾರ್ವಜನಿಕ ಸರಕು (Public Goods)ಗಳಾದ ಶಿಕ್ಷಣ, ಆರೋಗ್ಯ, ಆಹಾರ ಮುಂತಾದವುಗಳನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿ. ಸರ್ಕಾರವು ತನ್ನ ಜವಾಬ್ದಾ ರಿಯನ್ನು ನಿರ್ವಹಿಸುವಂತೆ ಅದರ ಮೇಲೆ ಒತ್ತಡವೇರುವ ಕೆಲಸವನ್ನು ಸಾರ್ವಜನಿಕರು

ಮಾಡಬೇಕಾಗುತ್ತದೆ. ಅಮಾರ್ತ್ಯಸೇನ್‌ರವರು ಹೇಳುವಂತೆ ಪ್ರಜಾಪ್ರಭುತ್ವ ಹಾಗೂ ಸಾರ್ವಜನಿಕ ಒತ್ತಡ ಎಲ್ಲಿ ವಿಕಲತೆಯಿಂದ ಕೂಡಿರುತ್ತದೆಯೋ ಅಲ್ಲಿ ಅಭಿವೃದ್ಧಿಯು ವಿಫಲವಾಗುವುದು ಅನಿವಾರ್ಯ. ಅಭಿವೃದ್ಧಿ ಶೀಲ ಆರ್ಥಿಕತೆಗಳಲ್ಲಿ ಉತ್ಪಾದನಾ ಕರ್ತೃಗಳ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸುವಲ್ಲಿ *ಆರೋಗ್ಯ ಆಹಾರ*ಗಳಿಗೆ ಸಂಬಂಧಿಸಿದ ಕ್ರಮಗಳು ಮಹತ್ವದ ಪಾತ್ರ ನಿರ್ವಹಿಸಬಲ್ಲವು. ಇತ್ತೀಚೆಗೆ ಸ್ಪಷ್ಟವಾಗಿರುವ ಒಂದು ಅಂಶವೆಂದರೆ ಅಭಿವೃದ್ಧಿಯಲ್ಲಿ ಹೂಟೆಗಿಂತ ಉತ್ಪಾದನಾ ಕರ್ತೃಗಳ ಕಾರ್ಯಕ್ಷಮತೆಯ ಪಾತ್ರ ಮಹತ್ವದ್ದು ಎನ್ನುವುದಾಗಿದೆ. ಉತ್ಪಾದನಾ ಕರ್ತೃಗಳ ದಕ್ಷತೆ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸುವಲ್ಲಿ ಆರೋಗ್ಯ, ಪೌಷ್ಟಿಕ ಆಹಾರದ ವಿತರಣೆ, ಶಿಕ್ಷಣ, ತರಬೇತಿ ತುಂಬಾ ಮುಖ್ಯವಾಗುತ್ತದೆ. ಅಭಿವೃದ್ಧಿಯ ದೃಷ್ಟಿಯಿಂದ ಅದರಲ್ಲೂ ಅಭಿವೃದ್ಧಿಯ ಫಲ ಬಡವರಿಗೆ ದೊರಕುವಂತೆ ಮಾಡುವ ದೃಷ್ಟಿಯಿಂದ *ಶಿಕ್ಷಣ, ಆರೋಗ್ಯ, ಆಹಾರ*ಗಳ ಮೇಲೆ ಹೂಡುವ ಬಂಡವಾಳ ನಿಜಕ್ಕೂ ಸಾರ್ಥಕವಾಗುತ್ತದೆ.

ಉಪಸಂಹಾರ

ಅಭಿವೃದ್ಧಿ ಬಗೆಗಿನ ಚಿಂತನೆಯ ಪರಿಶೀಲನೆಯಲ್ಲಿ ಕಂಡು ಬರುವ ಒಂದು ಅಂಶವೆಂದರೆ ಅಭಿವೃದ್ಧಿಶೀಲ ಆರ್ಥಿಕತೆಗಳ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಅವುಗಳಿಗೆ ಪರಿಹಾರ ರೂಪಿಸಲು ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಮಾದರಿಯು ಅಸಮರ್ಥವಾಗಿದೆ. ಮಾರುಕಟ್ಟೆ ಆಧರಿತ ಬಂಡವಾಳಶಾಹಿ ವ್ಯವಸ್ಥೆಯು ಅಭಿವೃದ್ಧಿಯನ್ನು ಸಮರ್ಪಕವಾಗಿ ನಿರ್ವಹಿಸಬಲ್ಲುದು ಎಂಬುದರ ಬಗ್ಗೆ ಅನುಮಾನಗಳಿವೆ. ಇಲ್ಲಿ ನಾನು ಉದ್ದೇಶ ಪೂರ್ವಕವಾಗಿ ಮಾರ್ಕ್ಸಿಸ್ಟ್ ಚಿಂತನೆಯನ್ನು ನೇರವಾಗಿ ಚರ್ಚಿಸಲು ಹೋಗಿಲ್ಲ. ಆದರೆ ನಮ್ಮ ಈ ಅಭಿವೃದ್ಧಿ ಚಿಂತನೆಯ ಪರಿಶೀಲನೆಯಲ್ಲಿ ಮಾರ್ಕ್ಸ್‌ವಾದದ ಪ್ರಭಾವ ಇದ್ದೇಇದೆ. ಬಂಡವಾಳಶಾಹಿ ವ್ಯವಸ್ಥೆಯು ಸೃಷ್ಟಿಸುವ ವಿಕೃತಿ ವಿಕಾರಗಳನ್ನು ಸೂಚಿಸುವಾಗ ನಾವು ಅನುಸರಿಸಿರುವ ಮಾರ್ಗ ಮಾರ್ಕ್ಸ್‌ವಾದವೇ ಆಗಿದೆ. ಆದರೆ ಅದನ್ನು ನೇರವಾಗಿ ಎಲ್ಲೂ ನಾನು ಸೂಚಿಸಿಲ್ಲ.

ಅಭಿವೃದ್ಧಿ ಚಿಂತನೆಯು ತುಂಬಾ ಸೀಮಿತವಾದ ನೆಲೆಯಲ್ಲಿ ಕೇವಲ ಅರ್ಥಶಾಸ್ತ್ರದ ಚೌಕಟ್ಟಿನಲ್ಲಿ ಬೆಳೆದು ಬಂದಿರುವ ಬಗೆಯನ್ನು ನಾವು ಪರಿಶೀಲಿಸಿದ್ದೇವೆ. ಅಭಿವೃದ್ಧಿಯನ್ನು ಕೇವಲ ತಂತ್ರಜ್ಞಾನಕ್ಕೆ ಸೀಮಿತವಾದ ಸಮಸ್ಯೆ ಎಂದು ಪರಿಗಣಿಸುವ ಚಿಂತನೆಯ ಮಿತಿಗಳನ್ನು ನಾವು ಗಮನಿಸಿದ್ದೇವೆ. ಅಭಿವೃದ್ಧಿ ಎಂಬುದು ಕೇವಲ ಆರ್ಥಿಕ ಕ್ರಿಯೆಯಲ್ಲ. ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ನೆಲೆಗಳಿಂದ ಅಭಿವೃದ್ಧಿಯನ್ನು ಪ್ರತ್ಯೇಕಿಸುವುದು ಸಾಧ್ಯವಿಲ್ಲ.

ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಚಿಂತನೆಯ ಮಿತಿಗಳನ್ನು ನಾವು ಗುರುತಿಸಿದ್ದೇವೆ. ಅದಕ್ಕೆ ಪರ್ಯಾಯವಾದ ಅಭಿವೃದ್ಧಿ ಚಿಂತನೆಯ ಅವಶ್ಯಕತೆಯನ್ನು ಸೂಚಿಸ

ಲಾಗಿದೆ. ಈ ನಮ್ಮ ಪರಿಶೀಲನೆಯು ನವೀನ ಆರ್ಥಿಕ ನೀತಿಯ ಮಿತಿಗಳನ್ನು ಸಹ ಗುರುತಿಸಿದೆ. ಅಭಿವೃದ್ಧಿಶೀಲ ಆರ್ಥಿಕತೆಗಳ ಸಮಸ್ಯೆಗಳು ಕೇವಲ ಆರ್ಥಿಕ ಅಥವಾ ತಂತ್ರಜ್ಞಾನಕ್ಕೆ ಸಂಬಂಧಿಸಿದವುಗಳಲ್ಲ. ಭೂ ಮಾಲೀಕತ್ವ ವ್ಯವಸ್ಥೆ, ಸಂಪನ್ಮೂಲಗಳ ಮಾಲೀಕತ್ವ, ವರಮಾನದ ಕೇಂದ್ರೀಕರಣ, ಸಾಮಾಜಿಕ ವ್ಯವಸ್ಥೆಗಳಲ್ಲಿ ಸೂಕ್ತವಾದ ಬದಲಾವಣೆ, ಸುಧಾರಣೆ ಮಾಡಿಕೊಳ್ಳದೆ ಅಭಿವೃದ್ಧಿ ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಿಲ್ಲ. ಅಭಿವೃದ್ಧಿಯು ಕೇವಲ ಉತ್ಪನ್ನಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ಅದೊಂದು ಕೇವಲ ಜಿಎನ್‌ಪಿಯನ್ನು ಅದರ ವಾರ್ಷಿಕ ಏರಿಕೆದರವನ್ನು ಹೆಚ್ಚಿಸುವ ಪ್ರಶ್ನೆಯಷ್ಟೆಯಲ್ಲ. ಅಭಿವೃದ್ಧಿಯು ಕೆಲವು ಮೂಲಭೂತ ಬದಲಾವಣೆಗಳನ್ನು ಒಳಗೊಂಡಿದೆ. ಅಭಿವೃದ್ಧಿಯ ಫಲದ ಹಂಚಿಕೆಯ ಪ್ರಶ್ನೆಯೂ ಇದರಲ್ಲಿದೆ. ಅಭಿವೃದ್ಧಿ ಎಂಬುದು ಕೇವಲ ಖಾಸಗೀವಲಯ ಹಾಗೂ ಸಾರ್ವಜನಿಕ ವಲಯಗಳ ನಡುವಿನ ಕಿತ್ತಾಟದ ಪ್ರಶ್ನೆಯಲ್ಲ. ಮಾರುಕಟ್ಟೆ ವ್ಯವಸ್ಥೆ ಅದೆಷ್ಟೇ ದಕ್ಷವಾಗಿರಲಿ, ಸಮರ್ಥವಾಗಿರಲಿ ಇಂದು ಸರ್ಕಾರದ ಸಹಾಯವಿಲ್ಲದೆ ಅಭಿವೃದ್ಧಿಯನ್ನು ನಿರ್ವಹಿಸುವುದು ಸಾಧ್ಯವಿಲ್ಲ. ಅಭಿವೃದ್ಧಿ ಶೀಲ ಆರ್ಥಿಕತೆಗಳ ಸಂದರ್ಭದಲ್ಲಿ ಸರ್ಕಾರದ ಪಾತ್ರ ತುಂಬಾ ಮಹತ್ವವಾದುದು ಎಂಬುದನ್ನು ನಾವು ಗಮನಿಸಿದ್ದೇವೆ. ಈ ಚರ್ಚೆಯಲ್ಲಿ ನಾವು ಕೆಲವು ಮೂಲಭೂತ ಪ್ರಶ್ನೆಗಳನ್ನು ಅನುಮಾನ ಸಂಶಯಗಳನ್ನು ಗುರುತಿಸಿದ್ದೇವೆ. ಈ ಪ್ರಶ್ನೆ, ಅನುಮಾನ, ಸಂಶಯಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.

ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಮಾದರಿಗಳು ಬಂಡವಾಳಕ್ಕೆ ಯಂತ್ರಶಕ್ತಿಗೆ ಅತಿಮಹತ್ವದ ಸ್ಥಾನ ನೀಡಿದ್ದಾವೆ. ಈ ಬೆಳವಣಿಗೆಯು ಮಾನವ ಶ್ರಮದ ಬಗ್ಗೆ ಬಂಡವಾಳಶಾಹಿಯು ತೋರುತ್ತಿರುವ ತಿರಸ್ಕಾರಕ್ಕೆ ನಿದರ್ಶನವಾಗಿದೆ. ಇಂದು ಅಭಿವೃದ್ಧಿ ಶೀಲ ಆರ್ಥಿಕತೆಗಳು ಪಾಶ್ಚಿಮಾತ್ಯ ಚಿಂತನೆಗೆ ಮರುಳಾಗಿ ಅವೂ ಸಹ ಮನುಷ್ಯಶ್ರಮದ ಬಗ್ಗೆ ಅಲರ್ಜಿ ಭಾವನೆ ಬೆಳೆಸಿಕೊಂಡಿವೆ. ಬಂಡವಾಳಸಾಂದ್ರ ಉತ್ಪಾದನೆ ವಿದಾನವೇ ಪಾಶ್ಚಿಮಾತ್ಯ ಬಂಡವಾಳಶಾಹಿಗೆ ವಿಪತ್ತು ತಂದಿದೆ. ಆದ್ದರಿಂದ ಅಭಿವೃದ್ಧಿಶೀಲ ಆರ್ಥಿಕತೆಗಳು ಮಾನವ ಶ್ರಮ ಆಧರಿತ ಅಭಿವೃದ್ಧಿ ಮಾದರಿಯನ್ನು ರೂಪಿಸಿಕೊಳ್ಳುವ ಅವಶ್ಯಕತೆ ಇದೆ. ಅಭಿವೃದ್ಧಿಯು ಕೇವಲ ಜಿಎನ್‌ಪಿಯನ್ನು ಅಧಿಕಗೊಳಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಅಭಿವೃದ್ಧಿಯು ಜಿಎನ್‌ಪಿಯನ್ನು ಅಧಿಕಗೊಳಿಸುವುದರ ಜೊತೆಗೆ ಮಾನವಶ್ರಮದ ಬಳಕೆಯನ್ನು ಅಂದರೆ ಉದ್ಯೋಗದ ಅವಕಾಶಗಳನ್ನು ಹಿಗ್ಗಿಸಬೇಕು. ಅಭಿವೃದ್ಧಿಗೆ ಬಂಡವಾಳ ಅವಶ್ಯಕ. ಆದರೆ ಅದೊಂದರಿಂದಲೇ ಅಭಿವೃದ್ಧಿ ಸಾಧ್ಯವಿಲ್ಲ.

ಇಂದು ಮಾರುಕಟ್ಟೆ ಆಧರಿತ ಆರ್ಥಿಕತೆಗಳ ಬಗ್ಗೆ ತುಂಬಾ ಉತ್ಸಾಹದ ವಾತಾವರಣ ಸೃಷ್ಟಿಯಾಗಿದೆ. ಮಾರುಕಟ್ಟೆ ಪರವಾದ ಆರ್ಥಿಕ ಕಾರ್ಯಕ್ರಮ ಅಳವಡಿಸಿಕೊಳ್ಳುವಲ್ಲಿ ಪೈಪೋಟಿಯೇ ಶುರುವಾದಂತೆ ಭಾಸವಾಗುತ್ತಿದೆ. ಆದರೆ ಮಾರುಕಟ್ಟೆ ಆಧರಿತ

ವ್ಯವಸ್ಥೆಯು ಒಂದು ಪರಿಪೂರ್ಣವಾದ ವ್ಯವಸ್ಥೆಯೇನಲ್ಲ. ಸಾರ್ವಜನಿಕ ಒತ್ತಡ ಮತ್ತು ಸರ್ಕಾರಗಳ ಪಾತ್ರವನ್ನು ನಾವು ಅಭಿವೃದ್ಧಿ ಚಿಂತನೆಯಲ್ಲಿ ಕಡೆಗಣಿಸಲು ಸಾಧ್ಯವಿಲ್ಲ. ಮಾರುಕಟ್ಟೆ ವ್ಯವಸ್ಥೆಯು ಸರ್ಕಾರ, ಸಾರ್ವಜನಿಕ ವಲಯದ ಅಸ್ತಿತ್ವವನ್ನೇನು ತಿರಸ್ಕರಿಸುವುದಿಲ್ಲ. ಬಡತನ, ಹಸಿವು, ನಿರುದ್ಯೋಗ ಮುಂತಾದವುಗಳನ್ನು ಬಗೆಹರಿಸಲು ಮಾರುಕಟ್ಟೆ ಪರವಾದ ಆರ್ಥಿಕನೀತಿ ತುಂಬಾ ಪರಿಣಾಮಕಾರಿಯಾದುದು ಎಂಬ ಭಾವನೆ ಇಂದು ಉಂಟಾಗಿದೆ. ಆದರೆ ಇಂತಹ ಭಾವನೆಗಳಿಗೆ ಗಟ್ಟಿಯಾದ ಆಧಾರಗಳೇನಿಲ್ಲ. ಆದ್ದರಿಂದ ಅಭಿವೃದ್ಧಿ ಶೀಲ ಆರ್ಥಿಕತೆಗಳು ಮಾರುಕಟ್ಟೆ ಪರವಾದ ಆರ್ಥಿಕ ನೀತಿ ಹಾಗೂ ಸಾರ್ವಜನಿಕ ವಲಯ, ಸರ್ಕಾರ ಪರವಾದ ಆರ್ಥಿಕ ನೀತಿಗಳನ್ನು ಸೂಕ್ತವಾಗಿ ಸಮನ್ವಯಗೊಳಿಸಿಕೊಳ್ಳುವ ಅವಶ್ಯಕತೆ ಇದೆ. ನವೀನ ಆರ್ಥಿಕ ನೀತಿಯ ಕೆಲವು ಅಂಶಗಳು ಅತ್ಯಂತ ಅಪಾಯಕಾರಿಯಾಗಿದ್ದಾವೆ. ಇದರ ಬಗ್ಗೆ ಎಚ್ಚರಬೇಕು. ಅಭಿವೃದ್ಧಿಶೀಲ ಆರ್ಥಿಕತೆಗಳು ತಮ್ಮ ಕಳೆದ ನಾಲ್ಕು ದಶಕಗಳ ಅಭಿವೃದ್ಧಿಯ ಅನುಭವದ ಹಿನ್ನೆಲೆಯಲ್ಲಿ ಪಾಠಕಲಿಯಬೇಕಾಗಿದೆ. ಅಭಿವೃದ್ಧಿ ನೀತಿಗಳಿಗೆ ಬೇಕಾದ ಪರಿಕರಗಳನ್ನು ಈ ದೇಶಗಳು ತಮ್ಮ ವ್ಯವಸ್ಥೆಯಲ್ಲೇ ಹುಡುಕಿಕೊಳ್ಳಬೇಕೇ ಹೊರತು ಇನ್ನಾವ ದೇಶದಿಂದ ನಕಲು ಮಾಡಬಾರದು. ಅಭಿವೃದ್ಧಿಯು ಶೂನ್ಯದಲ್ಲೇನು ಸಂಭವಿಸುವುದಿಲ್ಲ. ಒಂದು ದೇಶದ ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಅಭಿವೃದ್ಧಿಯು ಸಂಭವಿಸಬೇಕು. ಅಭಿವೃದ್ಧಿಯಲ್ಲಿ ಇಂತಹ ದೇಶೀಯ ಚಿಂತನೆಯ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಸಿದ್ಧಾಂತಗಳ ಮರುಪರಿಶೀಲನೆ ಅವಶ್ಯಕತೆ ಇದೆ.

ಮಂಟಪ ಮಾಲೆ

೭

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವುಮಾಡಿಕೊಡುವ ಒಂದು ಸಂಸ್ಥೆ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ, ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ, ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟುಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನು ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮನಮ್ಮಲ್ಲಿ ವಿಚಾರ ವಿನಿಮಯ ನಡೆಯಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು, ಹಂಪಿಯಲ್ಲಿ ಪ್ರತಿವಾರವೂ ಮಂಟಪವೆಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗಬಹುದೆಂಬ ನಂಬಿಕೆಯಿಂದ ಕಡಮೆ ಬೆಲೆಯ ಕಿರು ಪುಸ್ತಿಕೆಗಳ ರೂಪದಲ್ಲಿ ನಿಮ್ಮ ಕೈಗಿಡುತ್ತಿದ್ದೇವೆ. ಕನ್ನಡದಲ್ಲಿ ಬಹುಶಃ ಇದೆ ಮೊದಲ ಬಾರಿಗೆ ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿ ಅಭಿವೃದ್ಧಿ ಮೀಮಾಂಸೆಯನ್ನು ಕುರಿತ ತಾತ್ತ್ವಿಕ ಚಿಂತನೆಗಳ ಪರಿಚಯ ಮಾಡಿಸಿಕೊಡುವ ಪುಸ್ತಿಕೆ ಈಗ ನಿಮ್ಮ ಕೈಗೆ ಬಂದಿದೆ. ಇದು ನಿಮಗೆ ಉಪಯೋಗವಾದರೆ ನಮಗೆ ಸಂತೋಷ.

ಡಾ. ಚಂದ್ರಶೇಖರ ಕಂಬಾರ
ಕುಲಪತಿಗಳು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೭೬